26	ಹಾಸನ	1142	859	-25	ಕೊರತೆ
27	ಚಿಕ್ಕಮಗಳೂರು	1833	1193	-35	ಕೊರತೆ
28	ಕೊಡಗು	2729	1690	-38	ಕೊರತೆ
29	ದಕ್ಷಿಣ ಕನ್ನಡ	4006	3284	-18	ಕೊರತೆ
30	ಉಡುಪಿ	4535	3525	-22	ಕೊರತೆ
31	ಉತ್ತರ ಕನ್ನಡ	2936	2408	-18	ವಾಡಿಕೆ

1. 2ನೇ ಫೆಬ್ರುವರಿ ಅನ್ವಯ ರಾಜ್ಯದ ಪ್ರಮುಖ ಜಲಾಶಯಗಳಲ್ಲಿನ ಸಂಗ್ರಹಣೆ ವಿವರ

Sl.No.	Name of the Reservoir	Reservoir Level Information (Meters)			Capacity in TMC				Flow details	
		FRL in meter above MSL	RL as on 02/02/2024	RL as on 02/02/2023	Gross Capacity TMC	Gross Storage as on 02/02/2024 TMC	Gross Storage as on 02/02/2023 TMC	Present Capacity % of Col. 8 as % of Col. 7	Cumulative inflows from 01.06.2023 (TMC)	Cumulative outflows from 01.06.2023 (TMC)
1	2	3	4	5	7	8	9	10	13	14
1	Linganamakki	554.44	541.16	547.03	151.75	47.52	83.57	31	105	66
2	Supa	564.00	541.15	547.44	145.33	65.15	83.20	45	80	56
3	Varahi	594.36	579.41	582.62	31.10	9.29	12.77	30	14	7
	HYDEL				328.18	121.97	179.53	37	199	130
4	Harangi	871.38	863.04	862.25	8.50	3.42	3.29	40	27	25
5	Hemavathi	890.58	881.26	885.09	37.10	14.86	22.35	40	38	38
6	K.R.S.*	38.04	28.00	34.50	49.45	17.08	35.04	35	74	65
7	Kabini	696.13	692.65	692.33	19.52	12.99	12.44	67	49	39
	CAUVERY BASIN				114.57	48.34	73.13	42	150	130
8	Bhadra	657.73	645.89	654.55	71.54	32.10	59.04	45	35	28
9	Tungabhadra	497.71	484.09	492.49	105.79	9.66	50.51	9	110	108
10	Ghataprabha	662.91	655.66	654.00	51.00	33.69	30.32	66	54	26
11	Malaprabha	633.80	626.46	629.06	37.73	13.11	19.95	35	17	12
12	Almatti	519.60	513.61	516.08	123.08	51.99	74.16	42	226	196
13	Narayanapura	492.25	488.70	491.03	33.31	19.60	28.08	59	169	164
	KRISHNA BASIN				422.45	160.14	262.05	38	417	336
14	VaniVilasSagar	652.24	648.52	652.21	30.42	20.64	30.34	68	0.35	5
	TOTAL				895.62	351.09	545.05	39	767	601

4. 2023ರ ಅಂತರ್ಜಲ ನೀರಿನ ಮಟ್ಟ

ಕಳೆದ ದಶಕ (2012-2022) ಡಿಸೆಂಬರ್ ಅವಧಿಯಲ್ಲಿ ಅಂತರ್ಜಲ ನೀರಿನ ಮಟ್ಟದಲ್ಲಿನ ವ್ಯತ್ಯಯ

ಕಳೆದ ದಶಕ ಡಿಸೆಂಬರ್ (2012-2022) ಅವಧಿಯ ಸರಾಸರಿ ತಾಲ್ಲೂಕುವಾರು ಅಂತರ್ಜಲ ಮಟ್ಟವನ್ನು ಹೋಲಿಸಿದಾಗ ಪ್ರಸ್ತುತ ಡಿಸೆಂಬರ್ 2023ರ ತಾಲ್ಲೂಕುವಾರು ಅಂತರ್ಜಲ ಮಟ್ಟವನ್ನು ಗಮನಿಸಿದಾಗ 236 ತಾಲ್ಲೂಕುಗಳ ಪೈಕಿಎ 117 ತಾಲ್ಲೂಕುಗಳಲ್ಲಿ ಏರಿಕೆ ಕಂಡುಬಂದಿದ್ದು, 119 ತಾಲ್ಲೂಕುಗಳಲ್ಲಿ ಇಳಿಕೆ ಕಂಡುಬಂದಿರುತ್ತದೆ

2. 31ನೇ ಜನವರಿ ಅನ್ವಯ ರಾಜ್ಯದ ಸಣ್ಣ ನೀರಾವರಿ ಕೆರೆಕಟ್ಟೆಗಳಲ್ಲಿನ ಸಂಗ್ರಹಣೆ ವಿವರ

Sl No.	DISTRICT	No Of Tanks	Full Capacity mcft.	No.of Tanks (Storage)		
				<30% Insigficant	30 to 50%	>50%
1	Bengaluru Urban	46	1400	0	20	26
2	Bengaluru Rural	98	3107	7	65	26
3	Ramanagara	101	4946	14	62	25
4	Kolar	138	5182	0	116	22
5	Chikkaballapura	201	7954	25	159	17
6	Tumakuru	371	16673	125	223	23
7	Chitradurga	166	9131	12	142	12
8	Davanagere	72	5121	6	62	4
9	Shivamoga	306	3556	0	253	53
10	Mysuru	50	1116	2	32	16
11	Chamarajnagar	64	2360	11	41	12
12	Mandya	48	1232	9	31	8
13	Hassan	170	4946	7	158	5
14	Chikkamagulur	124	4267	20	63	41
15	Dakshina Kannada	2	7	0	1	1
16	Udupi	4	42	0	0	4
17	Kodagu	29	509	0	24	5
18	Belgauvi	290	3237	131	145	14
19	Vijayapura	157	3635	56	64	37
20	Bagalkote	69	1838	39	18	12
21	Dharwad	112	1739	0	100	12
22	Gadag	32	1377	2	25	5
23	Haveri	264	4010	0	165	99
24	Uttara kannada	91	1773	0	81	10
25	Kalaburgai	169	4954	40	109	20
26	Yadgiri	71	2777	2	44	25
27	Bidar	125	2958	29	47	49
28	Ballari	36	766	14	20	2
29	Vijayanagara	84	3450	34	50	0
30	Koppala	122	1937	46	66	10
31	Raichur	73	1789	11	48	14
TOTAL		**3685**	**107788**	**642**	**2434**	**609**
				17%	66%	17%

3. 28-01-2024 ರ ಅನ್ವಯ ಮೇವು ದಾಸ್ತನು ವಿವರ

ರಾಜ್ಯದಲ್ಲಿ 115 ಲಕ್ಷ ದೊಡ್ಡ ಜಾನವಾರುಗಳು ಮತ್ತು 172 ಲಕ್ಷ ಸಣ್ಣ ಜಾನುವಾರುಗಳಿರುವುದು ಕಂಡುಬಂದಿದ್ದು, ರಾಜ್ಯದಲ್ಲಿ ಮುಂದಿನ 27 ವಾರಗಳಿಗೆ ಸಾಕಾಗುವಷ್ಟು 148 ಲಕ್ಷ ಟನ್ ಮೇವು ದಾಸ್ತಾನು ಇರುವುದು ಕಂಡುಬಂದಿದೆ.

ಕ್ರಸಂ.	ಜಿಲ್ಲೆಗಳು	ದೊಡ್ಡ ಜಾನುವಾರುಗಳು (ಹಸು & ಎಮ್ಮೆ)	ಸಣ್ಣ ಜಾನುವಾರುಗಳು (ಕುರಿ & ಆಡು)	ಒಟ್ಟು ಮೇವು ಲಭ್ಯತೆ (ಟನ್‌ಗಳಲ್ಲಿ)	ಮೇವು ಲಭ್ಯತೆ ವಾರಗಳು
1	ಬೆಂಗಳೂರು ನಗರ	165029	145337	185191	25
2	ಬೆಂಗಳೂರು (ಗ್ರಾ)	187646	213944	332002	38
3	ಚಿತ್ರದುರ್ಗ	338907	1737145	183021	9
4	ಚಿಕ್ಕಬಳ್ಳಾಪುರ	230727	779867	287609	22
5	ದಾವಣಗೆರೆ	329697	317796	608338	41
6	ಕೋಲಾರ	236162	577605	166014	14
7	ರಾಮನಗರ	307146	278118	351003	25
8	ಶಿವಮೊಗ್ಗ	639216	102245	1329350	49
9	ತುಮಕೂರು	574190	1719048	374478	12
10	ಚಾಮರಾಜನಗರ	254722	279954	227096	19
11	ಚಿಕ್ಕಮಗಳೂರು	326313	139502	456997	32
12	ದಕ್ಷಿಣ ಕನ್ನಡ	252401	32504	187515	18
13	ಹಾಸನ	656156	328445	1532413	53
14	ಕೊಡಗು	76920	8253	96489	30
15	ಮೈಸೂರು	514280	411669	788877	36
16	ಮಂಡ್ಯ	479429	693563	254077	11
17	ಉಡುಪಿ	257184	3107	236075	22
18	ಬೆಳಗಾವಿ	1393711	1459420	1542184	24
19	ಬಾಗಲಕೋಟೆ	457163	1006782	787850	35
20	ಧಾರವಾಡ	233464	153938	254792	25
21	ಗದಗ	192109	587555	191781	19
22	ಹಾವೇರಿ	346561	458174	787318	49
23	ಉತ್ತರ ಕನ್ನಡ	410305	19192	345677	20
24	ವಿಜಯಪುರ	379190	916168	317017	17
25	ಬಳ್ಳಾರಿ	181426	591634	302047	31
26	ಬೀದರ್	299144	270183	329931	24
27	ಕೊಪ್ಪಳ	294880	797945	464532	31
28	ಕಲ್ಬುರಗಿ	458756	558587	325742	15
29	ರಾಯಚೂರ	357794	940351	459435	25
30	ಯಾದಗಿರಿ	290774	693940	709063	48
31	ವಿಜಯನಗರ	338560	979426	373780	22
	ಒಟ್ಟು	**11459962**	**17201397**	**14787694**	**27**

IV. ವಿಪತ್ತು ನಿರ್ವಹಣೆಗಾಗಿ ವಿಪತ್ತು ಅಪಾಯ ಕಾರ್ಯಸೂಚಿ ಯೋಜನೆಗಳು

1. ರಾಜ್ಯ ವಿಪತ್ತು ನಿರ್ವಹಣೆ ಯೋಜನೆ 2023

ಕರ್ನಾಟಕ ರಾಜ್ಯವು ಸತತವಾಗಿ ಹಲವಾರು ವಿಪತ್ತುಗಳಿಗೆ ತುತ್ತಾಗುತ್ತಿದ್ದು, ಜನ-ಜಾನುವಾರುಗಳ ಜೀವಹಾನಿ, ಆಸ್ತಿಪಾಸ್ತಿ ನಷ್ಟ ಹಾಗೂ ಮೂಲಭೂತ ಸೌಕರ್ಯಗಳ ಹಾನಿಯಿಂದಾಗಿ ಅಪಾರ ಪ್ರಮಾಣದ ಆರ್ಥಿಕ ನಷ್ಟವುಂಟಾಗುತ್ತಿದೆ. ರಾಜ್ಯದಲ್ಲಿವುಂಟಾಗುವ ವಿಪತ್ತುಗಳ ಸಮಗ್ರ ನಿರ್ವಹಣೆ ಹಾಗೂ ಅಪಾಯ ತಗ್ಗಿಸುವಿಕೆಗೆ ರಾಜ್ಯ ವಿಪತ್ತು ನಿರ್ವಹಣೆ ಯೋಜನೆಯು ಅತ್ಯಗತ್ಯವಾಗಿದೆ. ಕಂದಾಯ ಇಲಾಖೆ (ವಿ.ನಿ) ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು, ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರದ ಸಹಯೋಗದಲ್ಲಿ ರಾಜ್ಯದಲ್ಲಿ ಉಂಟಾಗುವ ವಿಪತ್ತುಗಳ ವಿಶ್ಲೇಷಣೆ ಕೈಗೊಂಡು ರಾಜ್ಯದಲ್ಲಿನ ಸಮಗ್ರ ವಿಪತ್ತು ನಿರ್ವಹಣೆಗೆ ಅಗತ್ಯವಾದ ರಾಜ್ಯ ವಿಪತ್ತು ನಿರ್ವಹಣೆ ಯೋಜನೆಯನ್ನು ಸಿದ್ಧಪಡಿಸಿದೆ.

2. ಬಿಸಿಗಾಳಿ ನಿರ್ವಹಣೆ ಕಾರ್ಯಯೋಜನೆ 2023

ಭಾರತೀಯ ಹವಾಮಾನ ಇಲಾಖೆಯು 2023ನೇ ಸಾಲಿನಲ್ಲಿ ಬಿಸಿಗಾಳಿ ಕುರಿತು ಹೊರಡಿಸಿರುವ ಮುನ್ಸೂಚನೆಯನುಸಾರ ದೇಶದ ಹೆಚ್ಚಿನ ಭಾಗಗಳಲ್ಲಿ ಸಾಮಾನ್ಯ ಗರಿಷ್ಟ ತಾಪಮಾನವನ್ನು ಸೂಚಿಸುತ್ತದೆ. ರಾಜ್ಯದ ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡು ಮತ್ತು ಕರಾವಳಿ ಪ್ರದೇಶಗಳ ಕೆಲವು ಭಾಗಗಳಲ್ಲಿ ಸಾಮಾನ್ಯ ತಾಪಮಾನಕ್ಕಿಂತ 2-3 ಡಿಗ್ರಿಗಳಷ್ಟು ಅಧಿಕ ತಾಪಮಾನ ದಾಖಲಾಗುತ್ತಿದ್ದು, ರಾಜ್ಯದಲ್ಲಿ ಅಧಿಕ ತಾಪಮಾನ ದಾಖಲಾಗುವ ಪ್ರದೇಶಗಳಲ್ಲಿ ಬಿಸಿಗಾಳಿ ಪರಿಸ್ಥಿತಿಗಳು ತಲೆದೋರುತ್ತಿದ್ದು, ಜನ-ಜಾನುವಾರಗಳ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡುತ್ತಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಬಿಸಿಗಾಳಿ ನಿರ್ವಹಣೆ ಕ್ರಿಯಾಯೋಜನೆಯನ್ನು ಸಿದ್ಧಪಡಿಸಲಾಗಿದ್ದು, ಸಾರ್ವಜನಿಕರಲ್ಲಿ ಬಿಸಿಗಾಳಿ ಪರಿಣಾಮಗಳ ಕುರಿತು ಜಾಗೃತಿ ಹಾಗೂ ಬಿಸಿಗಾಳಿ ಅಪಾಯ ಪರಿಣಾಮಗಳನ್ನು ತಗ್ಗಿಸುವ ಗುರಿ ಹೊಂದಿದೆ. ಈ ಕ್ರಿಯಾ ಯೋಜನೆಯು ಮಾಹಿತಿ ತಂತ್ರಜ್ಞಾನ ಹಾಗೂ ಸಮುದಾಯಾಧಾರಿತ ಬಿಸಿಗಾಳಿ ನಿರ್ವಹಣೆ ಅಂಶಗಳನ್ನು ಒಳಗೊಂಡಿದ್ದು, ಬಿಸಿಗಾಳಿ ಸಂದರ್ಭಗಳಲ್ಲಿ ಕೈಗೊಳ್ಳಬಹುದಾದ ಕಾರ್ಯಚಟುವಟಿಕೆಗಳು, ಮುಂಜಾಗ್ರತಾ ಕ್ರಮಗಳು ಹಾಗೂ

ಇಲಾಖಾವಾರು ಜವಾಬ್ದಾರಿ ಮತ್ತು ಕ್ರಮಗಳನ್ನು ಒಳಗೊಂಡಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಕಳೆದ 21 ವರ್ಷಗಳಲ್ಲಿನ ತಾಪಮಾನಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ವಿಶ್ಲೇಷಿಸಿ ರಾಜ್ಯದಲ್ಲಿ ಅಧಿಕ ತಾಪಮಾನ ದಾಖಲಾಗುವ ಸಂಭವನೀಯ ತಾಲ್ಲೂಕುಗಳನ್ನು ಗುರುತಿಸಿ, ಕರ್ನಾಟಕ ರಾಜ್ಯ ಬಿಸಿಗಾಳಿ ನಿರ್ವಹಣೆ ಕ್ರಿಯಾಯೋಜನೆ – 2023-24ನ್ನು ಸಿದ್ಧಪಡಿಸಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ಮಿಚಂಚೆಯ ಮೂಲಕ ತಲುಪಿಸಲಾಗಿದ್ದು, ಕೇಂದ್ರದ ಅಂತರ್ಜಾಲತಾಣದಲ್ಲಿ ಲಭ್ಯವಿದೆ.

3. ಸಿಡಿಲು-ಗುಡುಗು ಅಪಾಯ ನಿರ್ವಹಣೆ ಕ್ರಿಯಾ ಯೋಜನೆ – 2023-24

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಗುಡುಗು ಮತ್ತು ಸಿಡಿಲು ಬಡಿತದಿಂದ ಪರಿಣಾಮವನ್ನು ತಗ್ಗಿಸಲು ರಾಜ್ಯ ಮಟ್ಟದ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲು ಸೂಚಿಸಿದೆ. ಗುಡುಗು-ಸಿಡಿಲು ಬಡಿತವು ಸಾಮಾನ್ಯವಾಗಿ ಮುಂಗಾರು ಪೂರ್ವ ಹಾಗೂ ಮುಂಗಾರು ಅವಧಿಯಲ್ಲಿ ಸಾಮಾನ್ಯವಾಗಿದ್ದು ರಾಜ್ಯದ ಹಲವು ಭಾಗಗಳಲ್ಲಿ ಸಿಡಿಲು ಬಡಿತದಿಂದಾಗಿ ಜನ-ಜಾನುವಾರಗಳ ಜೀವಹಾನಿ, ಕೃಷಿ ಮತ್ತು ತೋಟಗಾರಿಕೆ ಬೆಳೆಹಾನಿ, ಸಾರ್ವಜನಿಕ ಅಸ್ತಿಪಾಸ್ತಿ ಹಾಗೂ ಮೂಲಸೌಕರ್ಯಗಳು ಹಾನಿಯುಂಟಾಗುತ್ತಿರುವುದು ಸಾಮಾನ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಸಿಡಿಲು-ಗುಡುಗುಗಳಿಂದಾಗುವ ಅಪಾಯಗಳನ್ನು ತಗ್ಗಿಸಲು ಅಗತ್ಯವಿರುವ ಸಿಡಿಲು-ಗುಡುಗು ಅಪಾಯ ನಿರ್ವಹಣೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದೆ. ಈ ಯೋಜನೆಯು ಸಿಡಿಲು-ಗುಡುಗು ಅಪಾಯ ನಿರ್ವಹಣೆ ಹಾಗೂ ಉಪಶಮನ ಮತ್ತು ಸನ್ನದ್ಧತೆ ಕ್ರಮಗಳು, ಇಲಾಖಾವಾರು ಕೈಗೊಳ್ಳಬಹುದಾದ ಮುನ್ನೆಚ್ಚರಿಕೆ ಕ್ರಮಗಳು ಒಳಗೊಂಡಿದೆ. ಗುಡುಗು – ಸಿಡಿಲು ಬಡಿತ ಅಪಾಯ ನಿರ್ವಹಣೆ ಕ್ರಿಯಾ ಯೋಜನೆಯು ಸಿಡಿಲು ಸಂದರ್ಭದಲ್ಲಿ ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳು ಹಾಗೂ ಸಲಹೆ ಸೂಚನೆಗಳನ್ನು ನೀಡಲಾಗಿದ್ದು ಸಂಭವನೀಯ ಜನ-ಜಾನುವಾರುಗಳ ಜೀವಹಾನಿ ಮತ್ತು ಆಸ್ತಿಪಾಸ್ತಿ ನಷ್ಟಗಳನ್ನು ತಗ್ಗಿಸಲು ನೆರವಾಗುತ್ತಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಸಿಡಿಲು ಬಡಿತ ನಿರ್ವಹಣೆಗಾಗಿ ಸಿಡಿಲು ಬಡಿತ ಸಂವೇಧಕಗಳನ್ನು ಸ್ಥಾಪಿಸಲಾಗಿದ್ದು, ಸಂಭವನೀಯ ಸಿಡಿಲು ಬಡಿತವುಂಟಾಗುವು ಪ್ರದೇಶಗಳಲ್ಲಿ ಸನ್ನದ್ಧತೆ, ಮುನ್ನೆಚ್ಚರಿಕೆ ಮತ್ತು ಮುನ್ಸೂಚನೆಗಳನ್ನು ನೀಡುವ ವ್ಯವಸ್ಥೆಯನ್ನು ಹೊಂದಿದ್ದು, ಸಿಡಿಲು ಮೊಬೈಲ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ. ಕರ್ನಾಟಕ

ರಾಜ್ಯ ಸಿಡಿಲು ಬಡಿತ ನಿರ್ವಹಣೆ ಕ್ರಿಯಾಯೋಜನೆ – 2023-24ಯನ್ನು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ಮಿಚಂಚೆಯ ಮೂಲಕ ತಲುಪಿಸಲಾಗಿದ್ದು, ಕೇಂದ್ರದ ಅಂತರ್ಜಾಲತಾಣದಲ್ಲಿ ಲಭ್ಯವಿದೆ.

4. ಭೂಕುಸಿತ ನಿರ್ವಹಣೆ ಕ್ರಿಯಾ ಯೋಜನೆ

ದೇಶದ ಪಶ್ಚಿಮಬಾಗದ ಅಂಚಿನಲ್ಲಿ ಅರೆಬಿಯನ್ ಸಮುದ್ರ ಮತ್ತು ಪೂರ್ವ ಬಯಲು ಪ್ರದೇಶಗಳನ್ನು ಬೇರ್ಪಡಿಸುವ ಘಟ್ಟಪ್ರದೇಶಗಳು ಅತ್ಯಂತ ಪ್ರಮುಖವಾಗಿದ್ದು, ಭೌಗೋಳಿಕವಾಗಿ ವಿಭಿನ್ನವಾದ ಪಶ್ಚಿಮಘಟ್ಟ ಶ್ರೇಣಿಗಳಿಂದ ಕೂಡಿದೆ. ಈ ಪಶ್ಚಿಮಘಟ್ಟಗಳು ಇಳಿಜಾರಿನಿಂದ ಕೂಡಿದ್ದು ಭೂಕುಸಿತಗಳು ಸಾಮಾನ್ಯವಾಗಿದೆ. ರಾಜ್ಯದ ಮಲೆನಾಡು ಮತ್ತು ಕರಾವಳಿ ಪ್ರಾಂತ್ಯದ ಪಶ್ಚಿಮಘಟ್ಟ ಪ್ರದೇಶವು ಸಹ ಭೂಕುಸಿತಪೀಡಿತವಾಗಿದ್ದು, ಇತ್ತೀಚಿನ ಅನಿರ್ಬಂದಿತ ಮಾನವಹಸ್ತಕ್ಷೇಪ ಮತ್ತು ಅರಣ್ಯನಾಶಗಳು ಭೂಕುಸಿತ ಅಪಾಯ ಪರಿಣಾಮಗಳನ್ನು ಹೆಚ್ಚಿಸಿವೆ.

ರಾಜ್ಯದಲ್ಲಿ ಸಂಭವಿಸುವ ಭೂಕುಸಿತಗಳ ಅಪಾಯ ಪರಿಣಾಮಗಳನ್ನು ತಗ್ಗಿಸಲು ಭೂಕುಸಿತ ಅಪಾಯ ನಿರ್ವಹಣೆ ಕಾರ್ಯಸೂಚಿ ಯೋಜನೆಯು ಅತ್ಯಗತ್ಯವಾಗಿದ್ದು, ಭೂಕುಸಿತಗಳ ತಡೆ ಪರಿಹಾರೋಪಾಯಗಳು, ನೀತಿ ಮತ್ತು ಯೋಜನೆ, ಸಮುದಾಯ ಭಾಗಿತ್ವ, ತಂತ್ರಜ್ಞಾನ ಆಧಾರಿತ ಅನುಷ್ಠಾನಗಳು ಹಾಗೂ ರಕ್ಷಣೆ, ತುರ್ತು ಪ್ರತಿಕ್ರಿಯೆ ಮತ್ತು ಪರಿಹಾರ ಹಾಗೂ ನೈಜ ಸಮಯಾಧಾರಿತ ಭೂಕುಸಿತಗಳ ನಿರ್ವಹಣೆ ಯೋಜನೆಯನ್ನು ಹೊಂದಿದೆ. ಈ ಯೋಜನೆಯು ಭೂಕುಸಿತಗಳಿಂದಾಗುವ ಹಾನಿ ಮತ್ತು ನಷ್ಟಗಳನ್ನು ತಗ್ಗಿಸಲು ನೆರವಾಗಲಿದ್ದು, ಭೂಕುಸಿತ ಸಂದರ್ಭಗಳಲ್ಲಿ ಅನುಸರಿಸಬಹುದಾದ ಮುನ್ನೆಚ್ಚರಿಕೆ, ಸನ್ನದ್ಧತೆ ಮತ್ತು ಮುಂಜಾಗ್ರತಾ ಕ್ರಮಗಳು ಹಾಗೂ ಇಲಾಖಾವಾರು ಜವಾಬ್ದಾರಿಗಳು ಮತ್ತು ಪಾತ್ರ, ಸಾರ್ವಜನಿಕ ಜಾಗೃತಿ ಕುರಿತ ವಿವರಗಳನ್ನು ಹೊಂದಿದೆ.

5. ಭೂಕಂಪನ ಅಪಾಯ ನಿರ್ವಹಣೆ ಕಾರ್ಯಯೋಜನೆ

ಕರ್ನಾಟಕ ರಾಜ್ಯವು ಭೂಕಂಪನ ವಲಯ II ಮತ್ತು III ರಲ್ಲಿ ಕಂಡುಬಂದಿದ್ದು, ರಾಜ್ಯದಲ್ಲಿ ಲಘು ಪ್ರಮಾಣದ ಭೂಕಂಪನಗಳು ಉಂಟಾಗುತ್ತಿದ್ದು, ಹೆಚ್ಚಿನ ಅಪಾಯ ಇಲ್ಲವಾದರೂ, ಜನ-ಸಾಮಾನ್ಯರಲ್ಲಿ ಭಯ ಮತ್ತು ಆತಂಕಕ್ಕೆ ಕಾರಣವಾಗುತ್ತಿದೆ. ಭೂಕಂಪನ ಅಪಾಯ ನಿರ್ವಹಣೆ ಕಾರ್ಯಯೋಜನೆಯು ಸಂಭವನೀಯ ಭೂಕಂಪನಗಳ ನಿರ್ವಹಣೆಯ ಎಲ್ಲಾ ಹಂತಗಳಲ್ಲಿ ಅಗತ್ಯವಾದ ಕ್ರಮಗಳು ಹಾಗೂ

ಭೂಕಂಪನಗಳಿಂದಾಗುವ ಹಾನಿ ಮತ್ತು ನಷ್ಟಗಳನ್ನು ತಗ್ಗಿಸುವಿಕೆ ಹಾಗೂ ಅಗತ್ಯ ಮುಂಜಾಗ್ರತಾ ಸನ್ನದ್ಧತಾ ಕ್ರಮಗಳನ್ನು ಕೈಗೊಳ್ಳಲು ಅತ್ಯಗತ್ಯವಾಗಿದೆ.

6. ರಾಜ್ಯ ಭೂಕಂಪನ ಅಪಾಯ ನಿರ್ವಹಣೆ ಕಾರ್ಯಯೋಜನೆಯು ಭೂಕಂಪನ ಅಪಾಯ ನಿರ್ವಹಣೆಯಲ್ಲಿ ಸಾಂಸ್ಥಿಕ ರಚನೆ, ಭೂಕಂಪನ ಪೀಡಿತ ವಲಯಗಳ ಅಪಾಯ ಮಟ್ಟ ಮತ್ತು ಸಾಮಾರ್ಥ್ಯ, ಭೂಕಂಪನ ವಿಶ್ಲೇಷಣೆ, ಉಸ್ತುವಾರಿ, ಮಾಹಿತಿ ವಿನಿಮಯ ಮತ್ತು ಪ್ರಸರಣೆ ಹಾಗೂ ಭೂಕಂಪನಗಳ ಸಂದರ್ಭಗಳಲ್ಲಿ ಅಪಾಯ ಉಪಶಮನ, ಪ್ರತಿಕ್ರಿಯೆ ಮತ್ತು ಪರಿಹಾರ ಹಾಗೂ ಚೇತರಿಕೆ, ಪುನರ್‌ನಿರ್ಮಾಣ, ಸಾಮಾರ್ಥ್ಯಭಿವೃದ್ಧಿಗೆ ಸಂಬಂಧಿಸಿದ ಕಾರ್ಯಯೋಜನೆಗಳನ್ನು ಹೊಂದಿದೆ. ಈ ಯೋಜನೆಯು ಭೂಕಂಪನವುಂಟಾದ ಸಂದರ್ಭಗಳಲ್ಲಿ ಜಿಲ್ಲಾಡಳಿತಗಳು, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಸಂಬಂಧಪಟ್ಟ ಸಂಸ್ಥೆಗಳೊಂದಿಗೆ ಭೂಕಂಪನ ಅಪಾಯ ತಗ್ಗಿಸಲು ನೆರವಾಗಲಿದ್ದು, ನಿಯಮಿತವಾಗಿ ಅಗತ್ಯ ದತ್ತಾಂಶಗಳು, ನೀತಿ ಮತ್ತು ಯೋಜನೆಗಳನ್ನು ಪರಿಷ್ಕರಿಸಲಾಗುತ್ತಿದೆ.

7. ಕರ್ನಾಟಕ ರಾಜ್ಯ ವಿಪತ್ತು ಅಪಾಯ ತಗ್ಗಿಸುವಿಕೆ ಮಾರ್ಗ ನಕ್ಷೆ-2022-2030:

2ನೇ ರಾಷ್ಟ್ರೀಯ ಮಟ್ಟದ ವಿಪತ್ತು ಅಪಾಯ ಕಡಿತ ವೇದಿಕೆ (NPDRR) ಯನ್ನು 15-16 ಮೇ 2017ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ಸುಸ್ಥಿತ ಅಭಿವೃದ್ಧಿಗಾಗಿ ವಿಪತ್ತು ಅಪಾಯ ಕಡಿತ ಕ್ರಮಗಳು-2030 ಸ್ಥಿತಿ ಸ್ಥಾಪಿಕತ್ವ ಭಾರತ ಎಂಬ ವಿಷಯದ ಮೇಲೆ ಸಮ್ಮೇಳನ ಹಮ್ಮಿಕೊಳ್ಳಲಾಯಿತು. ಈ ಸಭೆಯಲ್ಲಿ ಪ್ರಧಾನ ಮಂತ್ರಿಗಳವರ ವಿಪತ್ತು ಅಪಾಯ ಕಡಿತ ಕುರಿತಾದ 10 ಅಂಶಗಳ ಕಾರ್ಯಸೂಚಿ ಹಾಗೂ ಪ್ರಚಲಿತ ವಿದ್ಯಮಾನಗಳು ಕುರಿತು ಚರ್ಚಿಸಲಾಯಿತು. ಈ ವೇದಿಕೆಯಲ್ಲಿ ವಿಪತ್ತು ಅಪಾಯ ಕಡಿತ ಕುರಿತಾದ 10 ಅಂಶಗಳ ಕಾರ್ಯಸೂಚಿಯನ್ನು ಶಿಫಾರಸ್ಸು ಮಾಡಲಾಯಿತು. ಅದರನ್ವಯ ಈಗಾಗಲೇ ಬಿಹಾರ್, ಅಸ್ಸಾಂ, ತಮಿಳುನಾಡು, ಕೇರಳ ಮತ್ತು ಆಂಧ್ರ ಪ್ರದೇಶ ರಾಜ್ಯಗಳು ವಿಪತ್ತು ಅಪಾಯ ತಗ್ಗಿಸುವ Disaster Risk Reduction Road Map (ಮಾರ್ಗ ನಕ್ಷೆ) ರಚಿಸಿ ಅನುಷ್ಠಾನಗೊಳಿಸಲು ಕಾರ್ಯಸೂಚಿಯನ್ನು ಸಿದ್ದಪಡಿಸಿದೆ.

ರಾಜ್ಯದಲ್ಲಿನ ಪ್ರಾದೇಶಿಕ ಅಸಮರ್ಪಕ ಮಳೆಹಂಚಿಕೆ ಹಾಗೂ ಮಳೆಪ್ರಮಾಣದಲ್ಲಿನ ವ್ಯತ್ಯಯಗಳಿಂದ ರಾಜ್ಯದಲ್ಲಿ ಬರ ಪರಿಸ್ಥಿತಿ ಸಾಮಾನ್ಯವಾಗಿದೆ. ಅಲ್ಲದೇ, ರಾಜ್ಯವು ಅತೀವೃಷ್ಟಿ, ಪ್ರವಾಹ, ಚಂಡಮಾರುತ, ಆಲಿಕಲ್ಲುಮಳೆ, ಸಿಡಿಲುಬಡಿತ ಹಾಗೂ ಇತರೆ ವಿಪತ್ತುಗಳಿಗೆ ತುತ್ತಾಗುತ್ತಿದೆ. ಕಳೆದ 5 ವರ್ಷಗಳಲ್ಲಿ ಉಂಟಾದ ಸತತ

ವಿಪತ್ತುಗಳಿಂದಾಗಿ ಸುಮಾರು ರೂ.1.00 ಲಕ್ಷ ಕೋಟಿಗೂ ಹೆಚ್ಚು ಹಾನಿಯಾಗಿರುವುದನ್ನು ಅಂದಾಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿವಿಧ ಇಲಾಖೆಗಳೊಂದಿಗಿನ ಸಮಾಲೋಚನೆಯ ನಂತರ UNICEF ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ವಿಪತ್ತು ಅಪಾಯ ತಗ್ಗಿಸುವ ಮಾರ್ಗನಕ್ಷೆ Disaster Risk Reduction Road Map 2023-2030ನ್ನು ತಯಾರಿಸಲು 2021ರ ಮಾರ್ಚ್‌ನಲ್ಲಿ ನಿರ್ಧರಿಸಲಾಯಿತು.

ಈ ಸಂಬಂಧ 2021ರ ಮಾರ್ಚ್‌ನಲ್ಲಿ ಸಭೆ ಕೈಗೊಂಡು, ಇಲಾಖಾವಾರು ನೊಡಲ್ ಅಧಿಕಾರಿಗಳನ್ನು ಗುರುತಿಸಲಾಯಿತು. ನಂತರ 2022ರ ಮಾರ್ಚ್‌ನಲ್ಲಿ ರಾಜ್ಯಮಟ್ಟದ ಸಮ್ಮೇಳನವನ್ನು ಆಯೋಜಿಸಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಲಾಯಿತು. 2022ರ ಸೆಪ್ಟೆಂಬರ್ ಅವಧಿಗೆ ಮೊದಲ ಕರಡು ಸಿದ್ಧಪಡಿಸಿ ಎಲ್ಲಾ ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯ ಮತ್ತು ಸಲಹೆಗಳನ್ನು ಕ್ರೂಢೀಕರಿಸಿ ದಿನಾಂಕ 01-02-2023ರಂದು ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಅನುಮೋದನೆಗೊಂಡಿದೆ. ರಾಜ್ಯ ವಿಪತ್ತು ಅಪಾಯ ತಗ್ಗಿಸುವ ಮಾರ್ಗನಕ್ಷೆ Disaster Risk Reduction Road Map 2023-2030 ಯೋಜನೆಯು ವಿಪತ್ತು ನಿರ್ವಹಣೆಗೆ ಅಗತ್ಯ ಮಾರ್ಗಸೂಚಿಗಳನ್ನು ಹೊಂದಿದ್ದು, ಪೂರ್ವಭಾವಿ ಮತ್ತು ಅಪಾಯ ಕಡಿತ ನಿರ್ವಹಣಾ ಕಾರ್ಯ ವಿಧಾನದ ಮೂಲಕ ವಿಪತ್ತು ನಿರ್ವಹಣೆ, ಅಪಾಯ ಕಡಿತ / ತಗ್ಗಿಸುವ ಕ್ರಮಗಳು ಹಾಗೂ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಸಮುದಾಯಗಳ ಸನ್ನದ್ಧತೆ, ವಿಪತ್ತುಗಳಿಂದಾಗುವ ಜೀವಹಾನಿ, ಆಸ್ತಿ-ಪಾಸ್ತಿ ನಷ್ಟಗಳನ್ನು ತಡೆಗಟ್ಟಲು ಮುಂದಿನ 8 ವರ್ಷಗಳಲ್ಲಿ (2023-2030) ವಿವಿಧ ಇಲಾಖೆಗಳು ಕೈಗೊಳ್ಳಬೇಕಾದ ಅಲ್ಪಾವಧಿ ಮತ್ತು ಧೀರ್ಘಾವಧಿ ಚಟುವಟಿಕೆಗಳು ಹಾಗೂ ಸಮಗ್ರ ವಿಪತ್ತು ನಿರ್ವಹಣೆ, ಸುಸ್ಥಿರ ಮರುನಿರ್ಮಾಣ ಹಾಗೂ ಸ್ಥಿತಿಸ್ಥಾಪಕತೆ ಸಾಧಿಸುವ ಗುರಿ ಹೊಂದಿದೆ. ಇದರನ್ವಯ ಆಯಾಯ ಇಲಾಖೆಗಳು ತಮ್ಮ ಇಲಾಖೆಗಳ ಯೋಜನೆಗಳಲ್ಲಿ ವಿಪತ್ತು ಅಪಾಯ ತಗ್ಗಿಸುವ ಕ್ರಿಯೆಯನ್ನು ಅಳವಡಿಸಿ ಹವಾಮಾನ ಬದಲಾವಣೆಯಿಂದ ಉಂಟಾಗುವ ವಿಪತ್ತುಗಳ ಅಪಾಯ ನಷ್ಟವನ್ನು ಕಡಿತಗೊಳಿಸಿ ರಾಜ್ಯವನ್ನು ಸದೃಢಗೊಳಿಸಬೇಕಾಗಿದೆ.

V. ವಿಪತ್ತು ನಿರ್ವಹಣೆಯಲ್ಲಿ ಹೊಸ ಉಪಕ್ರಮಗಳು

1. ಬರ 2023 ಇನ್‌ಪುಟ್ ಸಹಾಯಧನ

ಇನ್‌ಪುಟ್ ಸಹಾಯಧನ ಪಾವತಿ ಪ್ರಕ್ರಿಯೆ:

<u>ಬರ 2023 ರ ಮೊದಲು ಇನ್‌ಪುಟ್ ಸಹಾಯಧನ/ಪರಿಹಾರ ಪಾವತಿಯ ಹಿಂದಿನ ವ್ಯವಸ್ಥೆ:</u>

- ❖ ಬೆಳೆ ನಷ್ಟ ಪರಿಹಾರ/ಇನ್‌ಪುಟ್ ಸಹಾಯಧನ /ಪರಿಹಾರ ಕ್ಲೈಮ್‌ಗಳನ್ನು ಗ್ರಾಮ ಸಹಾಯಕ ಮಟ್ಟದಲ್ಲಿ ಸ್ವತಂತ್ರ ಡೇಟಾ ಎಂಟ್ರಿ ಮೂಲಕ ತೆಗೆದುಕೊಳ್ಳಲಾಗಿದೆ. ಬಹು ಲಾಗಿನ್‌ಗಳನ್ನು ನೀಡಲಾಗಿದೆ ಮತ್ತು ಯಾವುದೇ ಹೊಣೆಗಾರಿಕೆಯಿಲ್ಲದೆ ಡೇಟಾ ಪ್ರವೇಶವನ್ನು ಸಕ್ರಿಯಗೊಳಿಸಲಾಗಿದೆ.

- ❖ NDRF ನೆರವಿಗಾಗಿ ಸರ್ಕಾರವು ಸಲ್ಲಿಸಿದ ವಿಪತ್ತು ಲಿಖಿತ ದಾಖಲೆಗೆ ವಿಪತ್ತಿನ ಕಾರಣದ ಬೆಳೆ ನಷ್ಟ ಮತ್ತು ಫಲಾನುಭವಿಗಳ ಡೇಟಾ ನಮೂದು ಮತ್ತು ವ್ಯವಸ್ಥೆಯು ಲೆಕ್ಕ ಹಾಕಲು ಸಾಧ್ಯವಾಗದ ಕಾರಣ ಬೆಳೆ ನಷ್ಟ ಪಾವತಿ ಮಾಡಿದ ನಡುವೆ ಯಾವುದೇ ಸಂಬಂಧವಿಲ್ಲ-

    i. ಲಿಖಿತ ದಾಖಲೆಯಲ್ಲಿ ಘೋಷಿಸಲಾದ ನಷ್ಟದ ಪ್ರದೇಶದ ಸಮಾನತೆ ಮತ್ತು ಸ್ವತಂತ್ರ ಡೇಟಾ ಪ್ರವೇಶದ ಮೂಲಕ ಹಕ್ಕು ಪಡೆಯಲಾಗಿದೆ
    ii. ರೈತರು ಅಥವಾ ಬೆಳೆಗಳ ಸಮಾನತೆ
    iii. ಮಳೆಯಾಶ್ರಿತ/ನೀರಾವರಿ/ಬಹುವಾರ್ಷಿಕ ಬೆಳೆಗಳ ಪ್ರಕಾರವನ್ನು ಜ್ಞಾಪಕ ಪತ್ರದಲ್ಲಿ ಘೋಷಿಸಲಾಗಿದೆ ಮತ್ತು ಡೇಟಾ ನಮೂದುನಲ್ಲಿ ಹೇಳಲಾಗಿದೆ

- ❖ NDRF ಮಾನದಂಡಗಳ ಪ್ರಕಾರ ರೈತರಿಗೆ ನೀಡಬೇಕಾದ ಇನ್‌ಪುಟ್ ಸಹಾಯಧನ ಮೊತ್ತವನ್ನು ಬೆಳೆಯ ಪ್ರಕಾರದ ಅಸ್ಥಿರಗಳ ಮೇಲೆ ಲೆಕ್ಕಹಾಕಲಾಗುತ್ತದೆ, ನೀರಾವರಿ ಮೂಲ ಮತ್ತು ಬೆಳೆ ನಷ್ಟದ ಪ್ರದೇಶದ ವ್ಯಾಪ್ತಿಯು. ಹಸ್ತಚಾಲಿತ ಡೇಟಾ ಎಂಟ್ರಿಯಿಂದಾಗಿ ಈ ಎಲ್ಲಾ ಮೂರು ವ್ಯತ್ಯಯ ಗುರುತಿಸುವಿಕೆಯ ಸಂಪೂರ್ಣ ವಿವೇಚನೆಯು ಫಲಾನುಭವಿ ರೈತರ ಗುರುತಿಸುವಿಕೆ ಸೇರಿದಂತೆ VAO ಮತ್ತು ಡೇಟಾ ಎಂಟ್ರಿ ಆಪರೇಟರ್‌ಗೆ ಇತ್ತು. ಆದ್ದರಿಂದ ಸೇರ್ಪಡೆ ಮತ್ತು ಹೊರಗಿಡುವಿಕೆಯು ವ್ಯವಸ್ಥೆಯಲ್ಲಿ ಯಾವುದೇ ವಸ್ತುನಿಷ್ಠತೆ ಮತ್ತು ಹೊಣೆಗಾರಿಕೆಯೊಂದಿಗೆ ವಿವೇಚನೆಯಿಂದ ಕೂಡಿತ್ತು. ವ್ಯವಸ್ಥೆಯು ಈ ಅನರ್ಹತೆಗಳನ್ನು ಫ್ಲ್ಯಾಗ್ ಮಾಡದೆಯೇ ನಿಜವಾದ ಹಾನಿಗೊಳಗಾದ ರೈತರನ್ನು ಹೊರಗಿಡಬಹುದು ಮತ್ತು ಅನರ್ಹ ಫಲಾನುಭವಿಗಳನ್ನು ಸೇರಿಸಬಹುದು.

- ❖ ಸಂಪೂರ್ಣ ಕಂದಾಯ ಯಂತ್ರೋಪಕರಣಗಳು ಕನಿಷ್ಠ ಒಂದು-ಎರಡು ತಿಂಗಳ ಕಾಲ ಡೇಟಾ ಎಂಟ್ರಿಯಲ್ಲಿ ತೊಡಗಿಕೊಂಡಿವೆ (ಸರಾಸರಿ ಹನ್ನೆರಡು ರಿಂದ ಹದಿನಾರು ಲಕ್ಷ ಹೆಕ್ಟೇರ್ ಬೆಳೆ ನಷ್ಟಕ್ಕೆ) ಇತರ ಕಂದಾಯ ಇಲಾಖೆಯ ಕೆಲಸಗಳಿಗೆ ಅಡ್ಡಿಯುಂಟುಮಾಡಿತು. ಡೇಟಾ ನಮೂದು ಸಮಯ ತೆಗೆದುಕೊಳ್ಳುತ್ತದೆ,

ಕೇಂದ್ರೀಕೃತ ಬ್ಯಾಂಕ್ ಖಾತೆಯ ಮೂಲಕ ಇನ್‌ಪುಟ್ ಸಬ್ಸಿಡಿ ಪಾವತಿ ಮತ್ತು ವಿವೇಚನಾ ಚಕ್ರಗಳಲ್ಲಿ ಪಾವತಿಯನ್ನು ಪ್ರಚೋದಿಸಲಾಯಿತು.

- ❖ ಅರ್ಜಿ ಸಲ್ಲಿಕೆ, ಡೇಟಾ ಎಂಟ್ರಿ ಸಮಸ್ಯೆಗಳು, ಪಾವತಿಗಳನ್ನು ಪ್ರಚೋದಿಸಲು ನಾಗರಿಕರ ಪುನರಾವರ್ತಿತ ಚಲನೆಯು ಆಯಾ ಕಂದಾಯ ಕಚೇರಿಗಳಿಗೆ ಇತ್ತು. ಮಧ್ಯವರ್ತಿಗಳು ಲಾಭ ಹೊಂದಿದರು ಮತ್ತು ಡೇಟಾ ಎಂಟ್ರಿ ಮತ್ತು ಪಾವತಿಗಾಗಿ ಪ್ರತಿ ಅಪ್ಲಿಕೇಶನ್‌ಗೆ ಹೆಚ್ಚುವರಿ ವೆಚ್ಚಗಳನ್ನು ನಿಗದಿಪಡಿಸಲಾಗಿದೆ.

- ❖ ಸರ್ಕಾರಿ ಇಲಾಖೆಗಳ ಇತರ ವಿಶ್ವಾಸಾರ್ಹ ಡೇಟಾ ಮೂಲಗಳೊಂದಿಗೆ ಯಾವುದೇ ಏಕೀಕರಣವಿಲ್ಲ; ಉದಾಹರಣೆಗೆ ಬೆಳೆ ಸಮೀಕ್ಷೆ ಬೆಳೆಯು ಡೇಟಾ ನಮೂದುಗಳಲ್ಲಿ ಬೆಳೆದ ಬೆಳೆಗಿಂತ ಸಂಪೂರ್ಣವಾಗಿ ಭಿನ್ನವಾಗಿರಬಹುದು, ಅದಕ್ಕಾಗಿ ಪರಿಹಾರವನ್ನು ಕ್ಲೈಮ್ ಮಾಡಲಾಗಿದೆ ಮತ್ತು ಅದೇ ಜಮೀನಿಗೆ ಬೆಳೆ ನಷ್ಟ ಪರಿಹಾರವಾಗಿ ಪಾವತಿಸಲಾಗಿದೆ.

- ❖ ಫಲಾನುಭವಿಯ ಮೌಲ್ಯೀಕರಣವು ಸಡಿಲವಾಗಿತ್ತು ಮತ್ತು ದ್ವಿಗುಣ ಕ್ಲೈಮ್‌ಗಳನ್ನು ರಹಸ್ಯವಾಗಿ ಅನುಮತಿಸಲಾಗಿದೆ ಏಕೆಂದರೆ ಅನನ್ಯ ಫಲಾನುಭವಿ ಐಡಿಯನ್ನು ರಚಿಸಲಾಗಿಲ್ಲ ಮತ್ತು ಬ್ಯಾಂಕ್ ಖಾತೆಯ ಮೂಲಕ ಪಾವತಿಯಾಗಿರುವುದರಿಂದ ನಕಲು ಮಾಡಲಾಗಿಲ್ಲ. ಉದಾಹರಣೆಗೆ ಅದೇ ಋತುವಿನ ಖಾರಿಫ್/ರಬಿಯಲ್ಲಿ ಅದೇ ಫಲಾನುಭವಿಯು ಬೆಳೆ ನಷ್ಟ ಮತ್ತು ಹೂಳು ತೆಗೆಯುವಿಕೆಗೆ ಪರಿಹಾರವನ್ನು ಕ್ಲೈಮ್ ಮಾಡುವ ನಿದರ್ಶನಗಳಿವೆ. ಆಧಾರ್ ಸಂಖ್ಯೆಯನ್ನು ಹಸ್ತಚಾಲಿತವಾಗಿ ನಮೂದಿಸಿದಂತೆ ಆಧಾರ್ ಸಂಖ್ಯೆಯು ಭೂಮಾಲೀಕನಲ್ಲದ ಸಂಪೂರ್ಣವಾಗಿ ಸಂಬಂಧವಿಲ್ಲದ ವ್ಯಕ್ತಿಗೆ ಸೇರಿದ್ದ ಉದಾಹರಣೆಗಳಿವೆ.

- ❖ ಅನರ್ಹ ಫಲಾನುಭವಿಗಳಿಗೆ ಇನ್‌ಪುಟ್ ಸಬ್ಸಿಡಿ ಮಂಜೂರಾತಿಯಿಂದಾಗಿ ಹಾವೇರಿ, ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಇತರ ಜಿಲ್ಲೆಗಳಲ್ಲಿ ದೂರುಗಳು ಮತ್ತು ವಿಚಾರಣೆಗಳು/ಪ್ರಗತಿಯ ವಿಚಾರಣೆಗಳು ನಡೆಯುತ್ತಿವೆ.

- ❖ ಪಾವತಿಯನ್ನು ತಲೆಕೆಳಗಾದ ಆದ್ಯತೆಯ ಆಧಾರದ ಮೇಲೆ ಮಾಡಲಾಯಿತು, ದೊಡ್ಡ ಪಾವತಿಗಳನ್ನು ಮೊದಲು ಮಾಡಲಾಯಿತು ಅಂದರೆ ಬಹುವಾರ್ಷಿಕ, ನಂತರ ನೀರಾವರಿ ಮತ್ತು ಕೊನೆಯದಾಗಿ ಮಳೆಯಾಶ್ರಿತ ರೈತರು, ಆ ಮೂಲಕ ಇನ್‌ಪುಟ್ ಸಬ್ಸಿಡಿಯ ಉದ್ದೇಶವನ್ನು ವಿಲೋಮಗೊಳಿಸಿದರು.

ಖಾರಿಫ್ ಬರ 2023 ಕ್ಕೆ ಅರ್ಹತೆ ಆಧಾರಿತ ಇನ್‌ಪುಟ್ ಸಬ್ಸಿಡಿ:-

- ❖ ಹೊಸ ಉಪಕ್ರಮವು ಪರಿಹಾರ ಸಾಫ್ಟ್‌ವೇರ್ ಮೂಲಕ ಡಿಜಿಟಲ್ ಬೆಳೆ ಸಮೀಕ್ಷೆ (ಖಾರಿಫ್) + FRUITS + ಭೂಮಿ ಡೇಟಾ ಸಿಸ್ಟಮ್‌ಗಳನ್ನು ಸಂಯೋಜಿಸುತ್ತದೆ. ಈ ಸಂಯೋಜಿತ ವಿಧಾನದ ಮೂಲಕ ಪ್ರತಿ ಸಂತ್ರಸ್ತ ರೈತರಿಗೆ ಕೈಪಿಡಿ ಡಾಟಾ ಎಂಟ್ರಿ

ಅಪ್ಲಿಕೇಶನ್ ಅಗತ್ಯವಿಲ್ಲ. (ಬೆಳೆಯ ಪ್ರಕಾರ, ನೀರಾವರಿ ಮೂಲ, ಬೆಳೆ ನಷ್ಟದ ಪ್ರದೇಶ, ಈ ಎಲ್ಲಾ ಮೂರು ವೇರಿಯಬಲ್‌ಗಳ ಗುರುತಿಸುವಿಕೆ, VAO ಮತ್ತು ಡೇಟಾದ ಮೇಲೆ ಸಂಪೂರ್ಣ ವಿವೇಚನೆ ಇತ್ತು. ಫಲಾನುಭವಿ ರೈತರ ಗುರುತಿಸುವಿಕೆ ಸೇರಿದಂತೆ ಎಂಟ್ರಿ ಆಪರೇಟರ್). ಬರ ಪೀಡಿತ ತಾಲ್ಲೂಕಿನಲ್ಲಿ ಹಣ್ಣಿನ ಐಡಿ ಹೊಂದಿರುವ ಎಲ್ಲಾ ರೈತರು, ಬರಗಾಲದಿಂದ ಬೆಳೆ ಹಾನಿಯನ್ನು ಅನುಭವಿಸಿದ್ದಾರೆ ಎಂದು ಜ್ಞಾಪಕ ಪತ್ರದಲ್ಲಿ ಗುರುತಿಸಿದಂತೆ ಬೆಳೆಗಳನ್ನು ಬೆಳೆದಿದ್ದಾರೆ ಎಂದು FRUITS ಮತ್ತು ಡಿಜಿಟಲ್ ಬೆಳೆ ಸಮೀಕ್ಷೆ ಡೇಟಾಬೇಸ್‌ನಿಂದ ಪಡೆಯಲಾಗುತ್ತದೆ. ಬೆಳೆ ಬೆಳೆಯುವ ಮೂಲ, ವಿಸ್ತೀರ್ಣ ಮತ್ತು ನೀರಾವರಿಯ ಪ್ರಕಾರವು ಬೆಳೆ ಸಮೀಕ್ಷೆ ಡೇಟಾಬೇಸ್ ಆಗಿದೆ.

- ❖ ಯಾವುದೇ ಸಮಯದ ವಿಳಂಬವಿಲ್ಲ, ಅರ್ಜಿ ಮತ್ತು ಸಂಬಂಧಿತ ಸಮಸ್ಯೆಗಳ ಡೇಟಾ ಎಂಟ್ರಿಗಾಗಿ ಆಯಾ ಕಂದಾಯ ಕಚೇರಿಗೆ ನಾಗರಿಕರ ಪುನರಾವರ್ತಿತ ಚಲನೆ, ಆಧಾರ್ ಸಂಖ್ಯೆ ನಮೂದು ದೋಷಗಳ ಪರಿಣಾಮವಾಗಿ ಅನರ್ಹ ವ್ಯಕ್ತಿಗಳಿಗೆ ಇನ್‌ಪುಟ್ ಸಬ್ಸಿಡಿ ವಿತರಣೆ, ಪಾವತಿಗಳನ್ನು ಪ್ರಚೋದಿಸಲು ರೈತರಿಂದ ಅನುಸರಣೆ ಇತ್ಯಾದಿ.

- ❖ ಸಂತ್ರಸ್ತ ರೈತರಿಂದ ಒಂದೇ ಒಂದು ಅರ್ಜಿಯನ್ನು ಪಡೆಯದೆ, ಬೆಳೆ ನಷ್ಟದ ಜ್ಞಾಪಕ ಪತ್ರವನ್ನು ಸಿದ್ಧಪಡಿಸುವಾಗ ಜಂಟಿ ಸಮೀಕ್ಷೆಯ ಸಮಯದಲ್ಲಿ ಆಯಾ ಜಿಲ್ಲಾಡಳಿತದಿಂದ ಬೆಳೆ ನಷ್ಟವಾಗಿದೆ ಎಂದು ಗುರುತಿಸಲಾದ ಹಾನಿಗೊಳಗಾದ ಭೂಮಿ ಮತ್ತು ಬೆಳೆಗಳ ಅರ್ಹತೆಯ ಆಧಾರದ ಮೇಲೆ ಇನ್ಪುಟ್ ಸಬ್ಸಿಡಿ ಪಾವತಿಯನ್ನು ಮಾಡಲಾಗುತ್ತಿದೆ.

- ❖ ಹಳೆಯ ಡಾಟಾ ಎಂಟ್ರಿ ಪದ್ಧತಿಯನ್ನು ಅನುಸರಿಸಿದರೆ ಸಂತ್ರಸ್ತ ರೈತರ ಡೇಟಾ ಎಂಟ್ರಿಗೆ ಕನಿಷ್ಠ ಎರಡು ತಿಂಗಳು ಬೇಕಾಗುತ್ತಿತ್ತು.

ಕನಿಷ್ಠ ಭೂಮಿ ಹೊಂದಿರುವ ರೈತರಿಗೆ ಆದ್ಯತೆ:-

ಹೊಸ ವ್ಯವಸ್ಥೆಯಲ್ಲಿ ಇನ್‌ಪುಟ್ ಸಬ್ಸಿಡಿಯ ಪಾವತಿ ತರ್ಕವು ಚಿಕ್ಕ ಮಳೆಯಾಶ್ರಿತ ಜಮೀನು ಹೊಂದಿರುವ ರೈತರಿಗೆ ಪಾವತಿಯೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಕ್ಲೈಮ್‌ಗಳ ಹೆಚ್ಚುತ್ತಿರುವ ಕ್ರಮವನ್ನು ಪೂರೈಸುತ್ತದೆ. ಜಿಲ್ಲಾಧಿಕಾರಿಯವರು ಸಲ್ಲಿಸಿದ ಬೆಳೆ ನಷ್ಟದ ಮೆಮೊರಾಂಡಮ್ (**ಅನುಬಂಧ 5 ಸಿ**) ಪ್ರಕಾರ ಒಟ್ಟು ಪ್ರದೇಶವನ್ನು ತಾಲೂಕುವಾರು ಹಾನಿಗೊಳಗಾದ ಪ್ರದೇಶ, ವರ್ಗವಾರು (ಮಳೆಯಾಶ್ರಿತ, ನೀರಾವರಿ, ದೀರ್ಘಕಾಲಿಕ) ಪ್ರದೇಶಕ್ಕೆ ತರ್ಕಬದ್ಧಗೊಳಿಸಲಾಗಿದೆ.

ಇನ್ಪುಟ್ ಸಬ್ಸಿಡಿಯ ಪಾವತಿ ತರ್ಕಕ್ಕೆ ಆದ್ಯತೆಯು ಈ ಕೆಳಗಿನಂತಿದೆ:

1. SMF-ಮಳೆಯಾಶ್ರಿತ (ಕನಿಷ್ಠ ಪ್ರದೇಶವನ್ನು ಹೊಂದಿರುವ ರೈತನಿಗೆ ಆದ್ಯತೆ ನೀಡಲಾಗಿದೆ)
2. OSMF-ಮಳೆಯಾಶ್ರಿತ (2 ಹೆಕ್ಟೇರ್‌ಗೆ ನಿರ್ಬಂಧಿಸಲಾಗಿದೆ)
3. SMF-ನೀರಾವರಿ (ಕನಿಷ್ಠ ಪ್ರದೇಶವನ್ನು ಹೊಂದಿರುವ ರೈತನಿಗೆ ಆದ್ಯತೆ ನೀಡಲಾಗಿದೆ)

4. OSMF-ನೀರಾವರಿ (2 ಹೆಕ್ಟೇರ್‌ಗೆ ನಿರ್ಬಂಧಿಸಲಾಗಿದೆ)
5. SMF- ದೀರ್ಘಕಾಲಿಕ (ಕನಿಷ್ಠ ಪ್ರದೇಶವನ್ನು ಹೊಂದಿರುವ ರೈತನಿಗೆ ಆದ್ಯತೆ ನೀಡಲಾಗಿದೆ)
6. OSMF-ಪೆರೆನಿಯಲ್ (2 ಹೆಕ್ಟೇರ್‌ಗೆ ನಿರ್ಬಂಧಿಸಲಾಗಿದೆ)
7. ತಾಲೂಕನ್ನು ಘಟಕವಾಗಿ ಹೊಂದಿರುವ ಪ್ರದೇಶದ ಮಿತಿಯು ಜ್ಞಾಪಕ ಪತ್ರದಲ್ಲಿ ಗುರುತಿಸಲಾದ ಬಾಧಿತ ಪ್ರದೇಶಕ್ಕೆ ಮತ್ತು ತಾಲೂಕಿಗೆ ಜ್ಞಾಪಕ ಪತ್ರದಲ್ಲಿ ಗುರುತಿಸಲಾದ ವ್ಯಾಪ್ತಿಯಂತೆ ಭೂಮಿಯ ಸ್ವರೂಪವನ್ನು (ಮಳೆಯಾಶ್ರಿತ/ನೀರಾವರಿ/ಸಾರ್ವಕಾಲಿಕ) ನಿರ್ಬಂಧಿಸಲಾಗಿದೆ. ಜಿಲ್ಲಾಧಿಕಾರಿಗಳು ಸಲ್ಲಿಸಿರುವ ಜ್ಞಾಪನಾ ಪತ್ರದಲ್ಲಿ ಆ ತಾಲೂಕಿನಲ್ಲಿ ಗುರುತಿಸಲಾದ ಬೆಳೆಗಳ ಪ್ರಕಾರ ಅರ್ಹ ಬೆಳೆಗಳ ಪಟ್ಟಿ ಇದೆ.

ವಿಶ್ವ ಬ್ಯಾಂಕ್ ಯೋಜನೆ:

ವಿಶ್ವಬ್ಯಾಂಕ್ ಅನುದಾನಿತ ಕರ್ನಾಟಕ ಬಹುವಲಯ ವಿಪತ್ತು ಮತ್ತು ಹವಾಮಾನ ಸ್ಥಿತಿಸ್ಥಾಪಕತ್ವ ಯೋಜನೆಯನ್ನು ಕೈಗೆತ್ತಿಕೊಳ್ಳಲು ರಾಜ್ಯ ಸಚಿವ ಸಂಪುಟವು ಡಿಸೆಂಬರ್ 7 ರಂದು ಅನುಮೋದನೆ ನೀಡಿದೆ. ಕರ್ನಾಟಕ ಮಲ್ಟಿಸೆಕ್ಟರ್ ವಿಪತ್ತು ಮತ್ತು ಹವಾಮಾನ ಸ್ಥಿತಿಸ್ಥಾಪಕತ್ವ ಯೋಜನೆಯು ಹವಾಮಾನ ಬದಲಾವಣೆ ಮತ್ತು ನೈಸರ್ಗಿಕ ವಿಕೋಪಗಳ ಪರಿಣಾಮಗಳ ವಿರುದ್ಧ ಕರ್ನಾಟಕದ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸಲು, ಯೋಜನೆ ಮತ್ತು ಹೂಡಿಕೆಗಳ ಅನುಷ್ಠಾನದಲ್ಲಿ ಹವಾಮಾನ ಮತ್ತು ವಿಪತ್ತು ಸ್ಥಿತಿಸ್ಥಾಪಕತ್ವದ ಮುಖ್ಯವಾಹಿನಿಗೆ ಅನುಕೂಲ ಕಲ್ಪಿಸುತ್ತದೆ. ಯೋಜನೆಯು ರಾಜ್ಯದಲ್ಲಿ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವ ಮತ್ತು ಪರಿಣಾಮಕಾರಿ ಹವಾಮಾನ ಮತ್ತು ವಿಪತ್ತು ಅಪಾಯದ ಆಡಳಿತ ಮತ್ತು ಮುಂಚಿನ ಎಚ್ಚರಿಕೆ ವ್ಯವಸ್ಥೆಗಳ ಪರಿಣಾಮಕಾರಿ ಕೊನೆಯ ಮೈಲಿ ವಿತರಣೆಯ ಮೂಲಕ ಪ್ರವಾಹ ಮತ್ತು ಬರಗಳಂತಹ ಹವಾಮಾನ-ಪ್ರೇರಿತ ವಿಪರೀತ ಘಟನೆಗಳ ಪ್ರತಿಕೂಲ ಪರಿಣಾಮಗಳ ವಿರುದ್ಧ ಸಮುದಾಯದ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಬಹು-ವಲಯ ವಿಧಾನವನ್ನು ಕಲ್ಪಿಸುತ್ತದೆ. ವಿಶ್ವಬ್ಯಾಂಕ್ ಯೋಜನೆಗೆ ಒಟ್ಟು ಮೊತ್ತ ರೂ. 5000 ಕೋಟಿ, ರಾಜ್ಯದ ಪಾಲು ರೂ. 1500 ಕೋಟಿ ಮತ್ತು ವಿಶ್ವಬ್ಯಾಂಕ್ ಪಾಲು ರೂ. 3500 ಕೋಟಿ. ಪ್ರಸ್ತುತ ಯೋಜನೆಯು ಉನ್ನತ ಮಟ್ಟದ ಸಮಿತಿಯ ಮುಂದಿದೆ

NDMF ಯೋಜನೆ:

- **ಬೆಂಗಳೂರು ನಗರ ನಗರ ಪ್ರವಾಹ ಅಪಾಯ ಕಡಿತ ಯೋಜನೆ**ಯನ್ನು NDRF ಅಡಿಯಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಮತ್ತು ನಗರ ಪ್ರವಾಹದಿಂದ ಅಪಾಯವನ್ನು ಕಡಿಮೆ ಮಾಡಲು ರಚನಾತ್ಮಕ ಮತ್ತು ರಚನಾತ್ಮಕವಲ್ಲದ ಹಸ್ತಕ್ಷೇಪವನ್ನು ತೆಗೆದುಕೊಳ್ಳಲಾಗುತ್ತದೆ. ಈ ಯೋಜನೆಗೆ ಒಟ್ಟು ನಿಧಿ ರೂ. 275 ಕೋಟಿ. ಯೋಜನೆಯನ್ನು ತಾಂತ್ರಿಕ ಸಲಹಾ ಸಮಿತಿಗೆ ಸಲ್ಲಿಸಲಾಗಿದೆ.

- **ಬರ ಪರಿಹಾರ ಯೋಜನೆ:** ಬರ ಪರಿಹಾರ ಯೋಜನೆಯು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ದೀರ್ಘಾವಧಿಯ ನಿರ್ವಹಣಾ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸುವುದನ್ನು ಒಳಗೊಂಡಿರುತ್ತದೆ, ಐದು ವರ್ಷಗಳಲ್ಲಿ ಹನ್ನೆರಡು ಬರಪೀಡಿತ ರಾಜ್ಯಗಳಿಗೆ ತಲಾ 100 ಕೋಟಿ ರೂ. ಪ್ರತಿ ಬರ ಪೀಡಿತ ಜಿಲ್ಲೆಯು ಮಧ್ಯಸ್ಥಿಕೆಗಳ ಒಮ್ಮುಖವನ್ನು ತರಲು ಮತ್ತು ದೀರ್ಘಾವಧಿಯ ಆಧಾರದ ಮೇಲೆ ಅರೆ-ಶುಷ್ಕ ಪ್ರದೇಶಗಳು, ಒಣಭೂಮಿ ಕೃಷಿ ಮತ್ತು ಸಣ್ಣ ಮತ್ತು ಅತಿ ಸಣ್ಣ ರೈತರ ಮೇಲೆ ಕೇಂದ್ರೀಕರಿಸುವ ಯೋಜನೆಯನ್ನು ಅಭಿವೃದ್ಧಿಪಡಿಸಬೇಕು. ಕರ್ನಾಟಕ ರಾಜ್ಯ ಕೃಷಿ ಭಾಗ್ಯ (ಕೃಷಿ ಹೊಂಡಗಳು) ಬರ ನಿವಾರಣೆ ಮತ್ತು ಅಂತರ್ಜಲ ಮರುಪೂರಣದಲ್ಲಿ ಯಶಸ್ವಿಯಾಗಿದೆ. ಕೃಷಿ ಹೊಂಡಗಳ ನಿರ್ಮಾಣಕ್ಕೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ರೂ.100 ಕೋಟಿ ಮೀಸಲಿಡಲಾಗುತ್ತಿದೆ. ಯೋಜನೆಯನ್ನು ತಾಂತ್ರಿಕ ಸಲಹಾ ಸಮಿತಿ (TAC) ಅನುಮೋದಿಸಿದೆ ಮತ್ತು ಅದನ್ನು SC-NEC ಮುಂದೆ ಇರಿಸಲಾಗಿದೆ.

VI. ಕೆಎಸ್‌ಎನ್‌ಡಿಎಂಸಿ ಕೇಂದ್ರದ ಕಾರ್ಯಚಟುವಟಿಕೆಗಳು ಮತ್ತು ಅತ್ಯುತ್ತಮ ರೂಢಿಗಳು

ವಿಪತ್ತು ನಿರ್ವಹಣೆಯು ವಿಜ್ಞಾನ ಮತ್ತು ತಂತ್ರಜ್ಞಾನ ಅವಲಂಬಿಸಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ವಿಪತ್ತು ನಿರ್ವಹಣೆಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಅನುಷ್ಠಾನಗಳೊಂದಿಗೆ ಪೂರ್ವಭಾವಿ ಮತ್ತು ಸಕಾಲದಲ್ಲಿ ಉಪಕ್ರಮಗೊಂದಿಗೆ ಸಂಬಂಧಪಟ್ಟ ಇಲಾಖೆಗಳಿಗೆ ವಿಪತ್ತು ನಿರ್ವಹಣೆಗೆ ಅಗತ್ಯವಾದ ವೇದಿಕೆಗಳನ್ನು ಒದಗಿಸುತ್ತಿದೆ. ರಾಜ್ಯವು ಇತ್ತೀಚಿನ ದಶಕಗಳಲ್ಲಿ ಹಲವು ನೈಸರ್ಗಿಕ ವಿಕೋಪಗಳಿಗೆ ಸತತ ತುತ್ತಾಗುತ್ತಿರುವುದು ಕಂಡುಬಂದಿದೆ. ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವನ್ನು ವಿಪತ್ತುಗಳ ಉಸ್ತುವಾರಿಗಾಗಿ ನೋಡಲ್ ಸಂಸ್ಥೆಯನ್ನಾಗಿ ಗುರುತಿಸಿದೆ.

ಹವಾಮಾನ ಸಂಬಂಧಿತ ವಿಪತ್ತು ನಿರ್ವಹಣೆಯಲ್ಲಿ ಮುನ್ಸೂಚನೆ, ಮುನ್ನೆಚ್ಚರಿಕೆ, ವಿಪತ್ತುಗಳ ಪೂರ್ವ ಗ್ರಹಿಸುವಿಕೆ, ಹಾಗೂ ಸಲಹೆ ಸೂಚನೆಗಳು, ಸನ್ನದ್ಧತೆ, ಪ್ರತಿಕ್ರಿಯೆ ಮತ್ತು ವಿಪತ್ತು ಉಪಶಮನ ಕ್ರಮಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಈ ಕೇಂದ್ರವು ವಿಪತ್ತು ಉಸ್ತುವಾರಿ ಮತ್ತು ಮಾಹಿತಿ ವಿನಿಮಯಕ್ಕಾಗಿ ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ ಸ್ಥಾಪಿಸಿದ್ದು, ಮುನ್ನೆಚ್ಚರಿಕೆ, ಮುನ್ಸೂಚನೆ ಹಾಗೂ ಸಲಹೆ ಸೂಚನೆಗಳನ್ನು ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಧಿಕಾರ ವರ್ಗ, ರೈತರು, ಮೀನುಗಾರರು ಹಾಗೂ ರಾಜ್ಯದ ಕಟ್ಟಕಡೆಯ ಸಮುದಾಯಗಳಿಗೆ ನೀಡುತ್ತಿದೆ. ವಿಪತ್ತು ಮುನ್ನೆಚ್ಚರಿಕೆಯು, ಸಮುದಾಯ ಜಾಗೃತಿ ಮತ್ತು ಸನ್ನದ್ಧತೆಗಳು ವಿಪತ್ತುಗಳಿಂದಾಗುವ ಅಪಾಯಗಳನ್ನು ತಗ್ಗಿಸಲು ಅತ್ಯಂತ ಪರಿಣಾಮಕಾರಿಯಾಗಿದೆ. ವಿಪತ್ತು ಮುನ್ನೆಚ್ಚರಿಕೆ ಪ್ರಮುಖವಾಗಿ ಕೆಳಕಂಡ 4 ಅಂಶಗಳನ್ನು ಒಳಗೊಂಡಿದೆ.

- ವಿಪತ್ತುಗಳನ್ನು ಪೂರ್ವಭಾವಿ ಗ್ರಹಿಸುವುದು
- ದತ್ತಾಂಶ ರವಾನೆ ಮತ್ತು ವಿಶ್ಲೇಷಣೆ
- ವಿಪತ್ತು ಮುನ್ನೆಚ್ಚರಿಕೆ
- ಎಚ್ಚರಿಕೆ ಪ್ರಸರಣೆ

ರಾಜ್ಯದಲ್ಲಿನ ನೈಸರ್ಗಿಕ ವಿಕೋಪಗಳ ಅಪಾಯಗಳು

ರಾಜ್ಯವು ಅನೇಕ ವಿಪತ್ತುಗಳಿಗೆ ತುತ್ತಾಗುತ್ತಿದ್ದು, ಹವಾಮಾನ ಮತ್ತು ಭೌಗೋಳಿಕ ಸಂಬಂಧಿತ ವಿಪತ್ತುಗಳು ಸಾಮಾನ್ಯವಾಗಿವೆ. ಬಹು ಮುಖ್ಯವಾಗಿ ಹವಾಮಾನ ಆಧಾರಿತ

ವಿನಾಶಕಾರಿ ವಿಪತ್ತುಗಳಾದ, ಬರ, ಪ್ರವಾಹ, ಆಲಿಕಲ್ಲು, ಬೀರುಗಾಳಿ ಮತ್ತು ಬಿಸಿಗಾಳಿ ಪರಿಸ್ಥಿತಿಗಳು ರಾಜ್ಯದ ಜನ-ಜಾನುವಾರುಗಳ ಜೀವಹಾನಿ ಮತ್ತು ಆಸ್ತಿಪಾಸ್ತಿ ನಷ್ಟವುಂಟಾಗುತ್ತಿವೆ. ರಾಜ್ಯದಲ್ಲಿವುಂಟಾಗುವ ವಿಪತ್ತುಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

- ಶೇ.80 ರಷ್ಟು ಭೌಗೋಳಿಕ ಪ್ರದೇಶವು ಬರಪೀಡಿತವಾಗಿದೆ.
- ಶೇ.22ರಷ್ಟು ಭೌಗೋಳಿಕ ಪ್ರದೇಶವು ಹಗುರ ಮತ್ತು ಲಘು ಭೂಕಂಪನಕ್ಕೆ ತುತ್ತಾಗುತ್ತದೆ.
- ರಾಜ್ಯದ ಕರಾವಳಿ ಭಾಗದ ಶೇ.24ರಷ್ಟು ಭೂಪ್ರದೇಶವು ಚಂಡಮಾರುತ/ವಾಯುಭಾರ ಕುಸಿತಕ್ಕೆ ತುತ್ತಾಗುತ್ತಿವೆ.
- ರಾಜ್ಯವು ಕಳೆದ 23 ವರ್ಷಗಳಲ್ಲಿ (2001-2023) 15 ವರ್ಷಗಳಲ್ಲಿ ಅತೀವೃಷ್ಟಿ ಮತ್ತು ಪ್ರವಾಹಕ್ಕೀಡಾಗಿದೆ.
- ರಾಜ್ಯದ ಪಶ್ಚಿಮಘಟ್ಟ ಪ್ರದೇಶಗಳಲ್ಲಿನ ಶೇ.30ಕ್ಕೂ ಅಧಿಕ ಇಳಿಜಾರು ಪ್ರದೇಶಗಳು ಭೂಕುಸಿತ ಪೀಡಿತವಾಗಿದೆ.
- ರಾಜ್ಯವು 320 ಕಿ.ಮೀ ಉದ್ದದ ಕರಾವಳಿಯನ್ನು ಹೊಂದಿದ್ದು ಸಮುದ್ರಕೊರೆತ ಮತ್ತು ಸುನಾಮಿಗೆ ತುತ್ತಾಗುತ್ತದೆ.
- ರಾಜ್ಯದಲ್ಲಿ ಪ್ರತಿವರ್ಷ ಆಲಿಕಲ್ಲು ಮಳೆ, ಸಿಡಿಲು ಬಡಿತ ಹಾಗೂ ಮೊಡಸಿಡಿತಗಳಿಂದ ಆಪಾರ ಬೆಳೆಹಾನಿ ಮತ್ತು ಜನ-ಜಾನುವಾರು ಪ್ರಾಣಹಾನಿವುಂಟಾಗುತ್ತಿದೆ.
- ಒಟ್ಟಾರೆ ರಾಜ್ಯದ ಎಲ್ಲಾ ಜಿಲ್ಲೆಗಳು ಪ್ರತಿವರ್ಷ ಒಂದು/ಒಂದಕ್ಕಿಂತಾ ಹೆಚ್ಚಿನ ವಿಪತ್ತುಗಳಿಗೆ ತುತ್ತಾಗುತ್ತಿವೆ.

ಈ ಹಿನ್ನೆಲೆಯಲ್ಲಿ ವಿಪತ್ತುಗಳ ಉಸ್ತುವಾರಿ ಮತ್ತು ಉಪಶಮನಕ್ಕಾಗಿ ದೇಶದಲ್ಲಿಯೇ ಪ್ರಪ್ರಥಮವಾಗಿ ಕರ್ನಾಟಕ ರಾಜ್ಯವು ಸಾಂಸ್ಥಿಕ ಕಾರ್ಯವಿಧಾನಗಳನ್ನೊಳಗೊಂಡ ಬರ ಉಸ್ತುವಾರಿ ಕೋಶವನ್ನು 1988ರಲ್ಲಿ ಸ್ಥಾಪಿಸಲಾಯಿತು. ತದನಂತರ ಬರ ಉಸ್ತುವಾರಿ ಕೋಶವನ್ನು ರಾಜ್ಯದ ಇತರ ಎಲ್ಲಾ ವಿಪತ್ತುಗಳ ಉಸ್ತುವಾರಿಯ ಸಲುವಾಗಿ 2007ರಲ್ಲಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಎಂದು ಮರುನಾಮಾಂಕಿತಗೊಳಿಸಲಾಯಿತು. ಈ ಕೇಂದ್ರವು ವಿಪತ್ತು ನಿರ್ವಹಣೆಗಳ ಉಸ್ತುವಾರಿಗಾಗಿ ಅನೇಕ ವೈಜ್ಞಾನಿಕ ಮತ್ತು ತಂತ್ರಜ್ಞಾನ ಆಧಾರಿತ ಅನನ್ಯ ಮಾದರಿಯ ಉಪಕ್ರಮ ಮಾದರಿಗಳು ದೇಶದಲ್ಲಿಯೇ ವಿಶಿಷ್ಟವೆನಿಸಿವೆ. ವಿಪತ್ತುಗಳ ಪೂರ್ವ ಗ್ರಹಿಸುವಿಕೆಯು ವಿಪತ್ತು ಸನ್ನದ್ದತೆ ಮತ್ತು ಮುಂಜಾಗ್ರತಾ ಕ್ರಮಗಳಲ್ಲಿ ಅತೀ ಪ್ರಮುಖವಾಗಿದ್ದು ವಿಪತ್ತು ಆಪಾಯ

ತಡೆಗಟ್ಟುವಿಕೆ ಮತ್ತು ಉಪಶಮನ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ನೆರವಾಗುತ್ತಿದೆ. ಅಧ್ಯಯನಗಳ ಪ್ರಕಾರ ವಿಪತ್ತು ಮುನ್ನೆಚ್ಚರಿಕೆ ಮತ್ತು ಸನ್ನದ್ಧತೆಗಳಿಗಾಗಿ ವ್ಯಯಿಸುವ ಒಂದು ರೂಪಾಯಿಯಷ್ಟು ವೆಚ್ಚವು, ವಿಪತ್ತುಪೂರ್ವ ಹಂತದ ರಕ್ಷಣೆ, ಪರಿಹಾರ ಮತ್ತು ಪುರ್ನವಸತಿಗಾಗಿ ವ್ಯಯಿಸುವ 7-10 ರೂಪಾಯಿಗಳಷ್ಟು ವೆಚ್ಚಗಳನ್ನು ಕಡಿತಗೊಳಿಸುವುದು ಎಂದು ಅಂದಾಜಿಸಿದೆ. ಮುನ್ನೆಚ್ಚರಿಕೆ, ಸನ್ನದ್ಧತೆಗಳ ಮೇಲಿನ ಹೂಡಿಕೆಯ ವೆಚ್ಚ ಮತ್ತು ಪ್ರಯೋಜನಗಳ ಅನುಪಾತವನ್ನು ಗಮನಿಸಬೇಕಾದ ಅಗತ್ಯವಿದೆ. ಸ್ಥಳೀಯ ಮಟ್ಟದ ಹವಾಮಾನ ಆಧಾರಿತ ದತ್ತಾಂಶ ಸಂಗ್ರಹಣೆಗಾಗಿ ಹವಾಮಾನಮಾಪನ ಕೇಂದ್ರಗಳ ಜಾಲ ಸ್ಥಾಪನೆ, ದತ್ತಾಂಶ ಸಂಗ್ರಹಣೆ, ವಿಶ್ಲೇಷಣೆ, ಸಂದೇಶ ಮತ್ತು ಎಚ್ಚರಿಕೆಗಳ ಸೃಜನೆ ಹಾಗೂ ಕ್ರೂಡಿಕೃತ ವರದಿಗಳ ಸಿದ್ಧತೆ ಮತ್ತು ಕಟ್ಟಕಡೆಯ ಸಮುದಾಯಕ್ಕೆ ವಿಪತ್ತು ಸಂದರ್ಭಗಳಲ್ಲಿನ ಸಲಹೆ, ಸೂಚನೆ ಮತ್ತು ಮುಂಜಾಗ್ರತಾ ಮಾಹಿತಿಗಳ ಪ್ರಸರಣೆ ಅತ್ಯಂತ ಮಹತ್ವವೆನಿಸಿದೆ.

ಕೇಂದ್ರದ ಚಟುವಟಿಕೆಗಳು ಮತ್ತು ದೇಯ್ಯೋದ್ದೇಶಗಳು

ವಿಪತ್ತು ನಿರ್ವಹಣೆಯು ವಿಜ್ಞಾನ ಮತ್ತು ತಂತ್ರಜ್ಞಾನ ಅವಲಂಬಿಸಿದ್ದು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ವಿಪತ್ತು ನಿರ್ವಹಣೆಗೆ ಅಗತ್ಯವಾದ ಸಾಮಾನ್ಯ ವೇದಿಕೆಯೊಂದಿಗೆ ಕೆಳಕಂಡ ದೇಯ್ಯೋದ್ದೇಶಗಳನ್ನು ಹೊಂದಿದೆ.

- ವಿಪತ್ತು/ಅಪಾಯ ಮತ್ತು ದುರ್ಬಲತೆಗಳ ಅಧ್ಯಯನ
- ವಿಪತ್ತು ನಿರ್ವಹಣೆಯಲ್ಲಿ ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನಗಳ ಅನುಷ್ಠಾನ
- ವಿಪತ್ತು ಉಸ್ತುವಾರಿ ಮತ್ತು ಪರಿಣಾಮಗಳ ಮೌಲ್ಯಮಾಪನ
- ವಿಪತ್ತು ಮುನ್ನೆಚ್ಚರಿಕೆ ಮತ್ತು ವೈಜ್ಞಾನಿಕ ಸಲಹೆ ಸೂಚನೆಗಳನ್ನು ನೀಡುವುದು

ಕೇಂದ್ರವು ರಾಜ್ಯದ ಪ್ರಮುಖ ವಿಪತ್ತುಗಳ ಬರ, ಪ್ರವಾಹ, ಆಲಿಕಲ್ಲು, ಚಂಡಮಾರುತ ಮತ್ತು ಇತರೆ ವಿಪತ್ತುಗಳ ವೈಜ್ಞಾನಿಕ ಹಿನ್ನೆಲೆ, ಸಂಬಂಧಪಟ್ಟ ದತ್ತಾಂಶಗಳ ಸಂಗ್ರಹಣೆ ಮತ್ತು ವಿಶ್ಲೇಷಣೆಗಳು, ವರದಿ ಸಿದ್ಧಪಡಿಸುವುದು ಹಾಗೂ ಕೇಂದ್ರ ಸರ್ಕಾರದ ಮಾನದಂಡಗಳ ಅನ್ವಯ ರಾಜ್ಯದ ಬರ ಪೀಡಿತ ಪ್ರದೇಶಗಳಲ್ಲಿ ಬರ ನಿರ್ವಹಣೆ ಮತ್ತು ಉಪಶಮನ ಕ್ರಮಗಳ ಅಧ್ಯಯನ ಮಾಡುವುದಾಗಿದೆ.

ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಉಸ್ತುವಾರಿ ಕೇಂದ್ರವು, ವಿಪತ್ತು ನಿರ್ವಹಣೆ ಮತ್ತು ವಿಪತ್ತು ಆಪಾಯ ಕಡಿತಕ್ಕೆ ಅಗತ್ಯವಾದ ವೈಜ್ಞಾನಿಕ ಒಳಹರಿವಿಗೆ ಅಗತ್ಯವಾದ ವೈಜ್ಞಾನಿಕ ದತ್ತಾಂಶಗಳು,

ಸಂಗ್ರಹಣೆ, ವಿಶ್ಲೇಷಣೆ, ಸಂವಹನೆ ಹಾಗೂ ಮಾಹಿತಿ ಪ್ರಸರಣೆ ಹಾಗೂ ಪರಿಣಾಮಕಾರಿ ವಿಪತ್ತುಗಳ ಉಸ್ತುವಾರಿ ಮತ್ತು ಆಪಾಯ ತಗ್ಗಿಸುವ ಗುರಿ ಮತ್ತು ಧ್ಯೇಯ್ಯಗಳನ್ನು ಹೊಂದಿದೆ.

ಕರ್ನಾಟಕ ರಾಜ್ಯವು ಭೌಗೋಳಿಕವಾಗಿ ದೇಶದ 8ನೇ ಅತೀ ದೊಡ್ಡ ರಾಜ್ಯವಾಗಿದ್ದು, ಅತೀ ಹೆಚ್ಚಿನ ಮಳೆಯಾಧಾರಿತ ಕೃಷಿ ಪ್ರದೇಶವನ್ನು (7.01 ಮಿಲಿಯನ್ ಹೆಕ್ಟೇರ್) ಹೊಂದಿದ್ದು ಕೇವಲ ಶೇ.26 ರಷ್ಟು ನೀರಾವರಿ ಕೃಷಿ ಪ್ರದೇಶವನ್ನು ಹೊಂದಿದೆ. ರಾಜ್ಯದಲ್ಲಿ ವಾರ್ಷಿಕ 1150 ಮಿ.ಮೀ ವಾಡಿಕೆ ಮಳೆಯಿದ್ದು, ಶೇ.70 ರಷ್ಟು ಮಳೆಯನ್ನು ನೈರುತ್ಯ ಮುಂಗಾರು ಅವಧಿಯಲ್ಲಿ ಪಡೆಯುತ್ತದೆ. ರಾಜ್ಯದಲ್ಲಿನ ಪ್ರಾದೇಶಿಕ ಮಳೆ ಹಂಚಿಕೆ ಮತ್ತು ಮಳೆ ಅವಧಿಗಳಲ್ಲಿ ವ್ಯತ್ಯಯವಿದ್ದು, ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ವಾರ್ಷಿಕವಾಗಿ 750 ಮಿ.ಮೀ ರಷ್ಟು ಕಡಿಮೆ ಪ್ರಮಾಣದ ಮಳೆಯಾಗುತ್ತದೆ. ಪ್ರಾದೇಶಿಕ ಅಸರ್ಮಪಕ ಮಳೆ ಹಂಚಿಕೆ ಮತ್ತು ಮಳೆಕೊರತೆಯು ರಾಜ್ಯದ ರೈತಾಪಿ ವರ್ಗದ ಮೇಲೆ ಅತೀವ ಪರಿಣಾಮಗಳನ್ನು ಉಂಟುಮಾಡುತ್ತದೆ. ಸುಸ್ಥಿರ ಅಭಿವೃದ್ಧಿ, ಕೃಷಿ, ವಿಪತ್ತು ನಿರ್ವಹಣೆಯಲ್ಲಿ, ಪ್ರಾದೇಶಿಕ ಮಟ್ಟದ ಹವಾಮಾನ ಸಂಬಂಧಿತ ದತ್ತಾಂಶ, ಮುನ್ಸೂಚನೆ ವ್ಯವಸ್ಥೆಯು ಕೃಷಿ ಮತ್ತು ಇತರೆ ಕ್ಷೇತ್ರಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

ದೇಶದ ವಿವಿಧ ಭಾಗಗಳಲ್ಲಿ ತಾಲ್ಲೂಕು ಮಟ್ಟದ ಸರಾಸರಿ ಮಳೆ ಮತ್ತು ಹವಾಮಾನ ಅಂಕಿಅಂಶಗಳನ್ನು ಪರಿಗಣಿಸಲಾಗುತ್ತಿದ್ದು, ರಾಜ್ಯದಲ್ಲಿಯೂ ಸಹ ತಾಲ್ಲೂಕು ಮಟ್ಟದ ಹವಾಮಾನ ಮತ್ತು ಮಳೆಮಾಪನ ಉಪಕರಣಗಳಿಂದ ದತ್ತಾಂಶಗಳನ್ನು ಸಂಗ್ರಹಿಸಲಾಗುತ್ತಿದ್ದು, ದತ್ತಾಂಶಗಳ ನಿಖರತೆ, ಮಾನವ ಹಸ್ತಕ್ಷೇಪ, ಅಸಮರ್ಪಕ ನಿರ್ವಹಣೆ, ದತ್ತಾಂಶ ಸಂಗ್ರಹಣೆ ಮತ್ತು ನಿರ್ವಹಣೆ ಹಾಗೂ ಇನ್ನಿತರ ತಾಂತ್ರಿಕ ದೋಷಗಳು ಸಾಮಾನ್ಯವಾಗಿದೆ. ಇದನ್ನು ಮನಗಂಡು ರಾಜ್ಯದಲ್ಲಿನ ಹವಾಮಾನ ಮತ್ತು ಮಳೆ ಹಂಚಿಕೆಯಲ್ಲಿನ ವ್ಯತ್ಯಯಗಳನ್ನು ನಿಖರತೆಯನ್ನು ಅರಿಯಲು ಮತ್ತು ರಾಜ್ಯದ ಕೃಷಿವಲಯ ಹಾಗೂ ಇತರೆ ವಲಯಗಳಿಗೂ ಅನುಕೂಲವಾಗುವಂತೆ ರಾಜ್ಯದಲ್ಲಿ ಅನನ್ಯ ರೀತಿಯ ಸ್ವಯಂಚಾಲಿತ, ಸೌರಶಕ್ತಿ ಆಧಾರಿತ, ದೂರಸ್ಥ ಹವಾಮಾನ ಮತ್ತು ಮಳೆಮಾಪನ ಉಪಕರಣಗಳ ಜಾಲವನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಸ್ಥಾಪಿಸಿ ನಿರ್ವಹಣೆ ಮಾಡಲಾಗುತ್ತಿದೆ.

ಹವಾಮಾನ ಮಾಪನ ಕೇಂದ್ರಗಳ ಜಾಲ

ಕರ್ನಾಟಕ ರಾಜ್ಯವು ದೇಶದಲ್ಲಿಯೇ ಅನನ್ಯ ಮಾದರಿಯ ರಾಜ್ಯದ ಎಲ್ಲಾ ಹೋಬಳಿ ಮಟ್ಟದಲ್ಲಿ ಪ್ರತಿ 250 ಚ.ಕಿ.ಮೀಗೆ ಒಂದರಂತೆ, ಸೌರಶಕ್ತಿ ಆಧಾರಿತ ಜಿಪಿಎಸ್ ಸಹಿತ ಸ್ವಯಂಚಾಲಿತ ದೂರಸ್ಥ ಹವಾಮಾನಮಾಪನ ಕೇಂದ್ರಗಳು ಹಾಗೂ ರಾಜ್ಯದ ಎಲ್ಲಾ ಗ್ರಾಮ

ಪಂಚಾಯಿತಿಗಳಲ್ಲಿ ಪ್ರತಿ 25 ಚ.ಕಿ.ಮೀಗೆ ಒಂದರಂತೆ, ಸೌರಶಕ್ತಿ ಆಧಾರಿತ ಜಿಪಿಎಸ್ ಸಹಿತ ಸ್ವಯಂಚಾಲಿತ ದೂರಸ್ಥ ಮಳೆಮಾಪನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಎಲ್ಲಾ ಹವಾಮಾನಮಾಪನ ಕೇಂದ್ರಗಳಿಂದ ತಾಪಮಾನ (^{0} ಸೆ), ಆದ್ರತೆ (ಶೇ), ಗಾಳಿಯ ವೇಗ (ಮೀ/ಸೆಂ) ಹಾಗೂ ಗಾಳಿಯ ದಿಕ್ಕು (^{0}) ಸಂಬಂಧಿಸಿದ ಮಾಹಿತಿಯನ್ನು ಹಾಗೂ ಎಲ್ಲಾ ಮಳೆಮಾಪನ ಕೇಂದ್ರಗಳಿಂದ ಮಳೆ ಪ್ರಮಾಣ (ಮಿ.ಮೀ) ಹಾಗೂ ಮಳೆತೀವ್ರತೆ (ಮಿ.ಮೀ/ಗಂಟೆ) ಮಾಹಿತಿಯನ್ನು ಪ್ರತಿದಿನ ಪ್ರತಿ 15 ನಿಮಿಷಗಳಿಗೊಮ್ಮೆ ದಿನದ 24 ಗಂಟೆಗಳಲ್ಲಿ (96 ದತ್ತಾಂಶಗಳು/ಕೇಂದ್ರ) ಕಲೆಹಾಕಲಾಗುತ್ತಿದೆ.

ರಾಜ್ಯದಲ್ಲಿನ ಹವಾಮಾನ/ಮಳೆಮಾಪನ ಕೇಂದ್ರಗಳ ಜಾಲವು ಹೆಚ್ಚು ಸಾಂದ್ರತೆ ಹೊಂದಿದ್ದು, ರಾಜ್ಯದ ಪ್ರಾದೇಶಿಕ ಹಾಗೂ ಅಸಮರ್ಪಕ ಮಳೆಹಂಚಿಕೆ, ಹವಾಮಾನ ಅಂಶಗಳಲ್ಲಿನ ವ್ಯತ್ಯಯಗಳನ್ನು ಆಧಾರಿಸಿ ವಿಪತ್ತು ನಿರ್ವಹಣೆ, ಹವಾಮಾನ ಸಂಬಂಧಿತ ಸಂಶೋಧನೆ, ಮುನ್ಸೂಚನೆ, ಮುನ್ನೆಚ್ಚರಿಕೆ ಮತ್ತು ಸಲಹೆ ಸೂಚನೆಗಳನ್ನು ಅಭಿವೃದ್ಧಿ ಪಡಿಸುವುದು, ಸೂಕ್ತ ನಿರ್ಧಾರ ಮತ್ತು ಯೋಜನೆಗಳನ್ನು ರೂಪಿಸಲು ನೆರವಾಗುತ್ತಿದೆ. ಅಲ್ಲದೇ ರಾಜ್ಯದ ರೈತಾಪಿ ವರ್ಗ ಮತ್ತು ಗ್ರಾಮೀನ ಪ್ರದೇಶಗಳಲ್ಲಿನ ಜನ ಸಮುದಾಯಗಳು ಹವಾಮಾನ ಆಧಾರಿತ ಕೃಷಿ ಪದ್ಧತಿಗಳು ಹಾಗೂ ವಿಪತ್ತು ಸಂದರ್ಭಗಳಲ್ಲಿನ ಸನ್ನದ್ಧತೆ ಮತ್ತು ಮುಂಜಾಗ್ರತೆಗಳನ್ನು ಕೈಗೊಳ್ಳಲು ಸಹಾಯಕವಾಗಿವೆ.

ಕೇಂದ್ರದಲ್ಲಿ ಹವಾಮಾನ/ಮಳೆಮಾಪನ ಕೇಂದ್ರಗಳಿಂದ ದತ್ತಾಂಶ ಸಂಗ್ರಹಣೆಯಲ್ಲಿ, ಮಾನವ ಹಸ್ತಕ್ಷೇಪರಹಿತವಾಗಿದ್ದು, ದತ್ತಾಂಶಗಳ ನಿಖರತೆ, ವಿಶ್ವಾರ್ಹತೆಯನ್ನು ಖಚಿತ ಪಡಿಸುತ್ತದೆ. ದತ್ತಾಂಶ ಸಂಗ್ರಹಣೆ, ವಿಶ್ಲೇಷಣೆ, ನಕ್ಷೆ ಹಾಗೂ ವರದಿಗಳನ್ನು ಸಿದ್ದ ಪಡಿಸುವ ಪ್ರಕ್ರಿಯೆಗಳನ್ನು ಸ್ವಯಂಚಾಲಿತವಾಗಿದ್ದು, ಅಗತ್ಯ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿದೆ. ನಿಜ ಸಮಯದ ಹವಾಮಾನ ಮಾಹಿತಿ, ನಕ್ಷೆ, ವರದಿಗಳು, ಮುನ್ನೆಚ್ಚರಿಕೆ ಸಂದೇಶಗಳು, ಹವಾಮಾನ ಆಧಾರಿತ ಕೃಷಿ ಸಲಹೆ ಸೂಚನೆಗಳನ್ನು ಸಂಬಂಧಿತ ಸರ್ಕಾರಿ ಇಲಾಖೆಯ ಅಧಿಕಾರಿ ವರ್ಗ ಹಾಗೂ ಸಾರ್ವಜನಿಕ ಮತ್ತು ರೈತ ಸಮುದಾಯಕ್ಕೆ ನೀಡಲಾಗುತ್ತಿದ್ದು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ನಿರ್ಧಾರಗಳನ್ನು ಕೈಗೊಳ್ಳಲು ಸಹಕಾರಿಯಾಗಿದೆ.

ಹವಾಮಾನ ಮುನ್ಸೂಚನೆ

ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹವಾಮಾನ ಮುನ್ಸೂಚನೆಯನ್ನು ನೀಡಲು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಅಂಗ

ಸಂಸ್ಥೆಗಳಾದ ಉಪಗ್ರಹ ಆನ್ವಯಿಕ ಕೇಂದ್ರ (SAC) ಆಹಮಾದಬಾದ್ ಮತ್ತು ಸತೀಶ್ ಧವನ್ ಉಪಗ್ರಹ ಕೇಂದ್ರ (SDSC-SHAR) ಶ್ರೀಹರಿಕೋಟಾ, ಸಹಯೋಗದೊಂದಿಗೆ ಗ್ರಾಮ ಪಂಚಾಯಿತಿ ಮಟ್ಟಕ್ಕೆ 24, 48, 72 ಗಂಟೆಗಳ ಮಳೆ ಹಾಗೂ ಹವಾಮಾನ ಮುನ್ಸೂಚನೆಯನ್ನು ನೀಡಲು ಮಾದರಿಗಳನ್ನು ಅಭಿವೃದ್ಧಿ ಪಡಿಸಲಾಗಿದೆ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ (ISRO) ಭಾರತೀಯ ಹವಾಮಾನ ಇಲಾಖೆ (ಹಾಗೂ ಇತರೆ ಮೂಲಗಳಿಂದ ಹವಾಮಾನ ಮುನ್ಸೂಚನೆಯನ್ನು ವಿಶ್ಲೇಷಿಸಿ ಅಲ್ಪಾವಧಿ, ಮದ್ಯಮ ಅವಧಿ ಮತ್ತು ದೀರ್ಘಾವಧಿಯ ಮುನ್ಸೂಚನೆಗಳನ್ನು ನೀಡಲಾಗುತ್ತಿದೆ. ಅಲ್ಪಾವಧಿಯು ಮುಂದಿನ 12 ಗಂಟೆಗಳವರೆಗಿನ, ಮದ್ಯಮ ಅವಧಿಯು ಮುಂದಿನ 10 ದಿನಗಳವರೆಗಿನ, ದೀರ್ಘಾವಧಿಯ ಹವಾಮಾನ ಮುನ್ಸೂಚನೆಯು ಮುಂದಿನ 2 ವಾರ (NCEP), ತಿಂಗಳು ಹಾಗೂ ಋತುವಿಗೆ ಸಂಬಂಧಿಸಿದಂತೆ ಹವಾಮಾನ ಮುನ್ಸೂಚನೆ ಮುನ್ನೋಟ (long-range weather outlook-IMD) ಯನ್ನು ನೀಡಲಾಗುತ್ತದೆ.

ರಾಜ್ಯದ ಪ್ರಾದೇಶಿಕ ಮಟ್ಟದ ಹವಾಮಾನ ಮುನ್ಸೂಚನೆಯಲ್ಲಿ ನಿಖರತೆ ಸಾಧಿಸಲು ರಾಜ್ಯದಲ್ಲಿನ ಹವಾಮಾನ ಮತ್ತು ಮಳೆಮಾಪನ ಕೇಂದ್ರಗಳ ದತ್ತಾಂಶಗಳನ್ನು ಹವಾಮಾನ ಮುನ್ಸೂಚನೆ ವ್ಯವಸ್ಥೆ ಮಾದರಿಗಳಲ್ಲಿ ಬಳಸಲಾಗುತ್ತಿದ್ದು, ಹವಾಮಾನ ಸಂಬಂಧಿತ ದತ್ತಾಂಶಗಳನ್ನು ಸಂಬಂಧಪಟ್ಟ ಇಲಾಖೆ, ಅಧಿಕಾರಿ ವರ್ಗದವರಿಗೆ ಸಕಾಲದಲ್ಲಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವುದು, ಯೋಜನೆ ಮತ್ತು ಅನುಷ್ಠಾನ ಕಾರ್ಯಗಳನ್ನು ಕೈಗೊಳ್ಳಲು ನೀಡಲಾಗುತ್ತಿದೆ ಹಾಗೂ ಸಾರ್ವಜನಿಕ ಉಪಯೋಗಕ್ಕಾಗಿ ತಕ್ಕಂತೆ ಹವಾಮಾನ ಆಧಾರಿತ ಸಲಹೆ, ಸೂಚನೆಗಳು ಲಭ್ಯವಾಗುವಂತೆ ಕ್ರಮ ವಹಿಸಲಾಗಿದೆ.

ಮುನ್ಸೂಚನೆ ಮಾದರಿ	ಮೂಲ
ಪ್ರಸ್ತುತ /ಅಲ್ಪಾವಧಿ	IMD, SAC & SDSC-SHAR - ISRO
ಮಧ್ಯಮ/ದೀರ್ಘಾವಧಿ	IMD, SDSC- SHAR, ISRO, NCEP-NCAR
ಋತು ಮುನ್ಸೂಚನೆ ಮುನ್ನೋಟ	IMD-IITM, MoES
ಅಲ್ಪಾವಧಿ & ಋತುಮಾನ	IMD, MoES

ಬರ ಪರಿಸ್ಥಿತಿ ಉಸ್ತುವಾರಿ

ಬರ ಪರಿಸ್ಥಿತಿಯು ಸಂಕೀರ್ಣತೆಯಿಂದ ಕೂಡಿದ್ದು, ವಿಭಿನ್ನ ಪ್ರದೇಶಗಳಲ್ಲಿ ಬರ ಪರಿಸ್ಥಿತಿಗಳನ್ನು ನಿರ್ಧರಿಸುವ ಮಾನದಂಡಗಳು ಬದಲಾಗುತ್ತವೆ ಹಾಗಾಗಿ ಬರ ಪರಿಸ್ಥಿತಿಗಳನ್ನು ನಿರ್ಧರಿಸಲು ಹಲವು ಮಾನದಂಡಗಳ ಅಗತ್ಯವಾಗುತ್ತವೆ. ಕರ್ನಾಟಕ ರಾಜ್ಯ

ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಹವಾಮಾನ/ಮಳೆಮಾಪನ ಕೇಂದ್ರಗಳ ಜಾಲದ ದತ್ತಾಂಶಗಳನ್ನು ಆಧಾರಿಸಿ ರಾಜ್ಯದಲ್ಲಿ ಹೋಬಳಿ ಮಟ್ಟದಲ್ಲಿ ಬರ ಪರಿಸ್ಥಿತಿ ವಿಶ್ಲೇಷಣೆ ಮತ್ತು ಉಸ್ತುವಾರಿಯನ್ನು ಕೈಗೊಳ್ಳಲಾಗುತ್ತಿದ್ದು. ರಾಜ್ಯ ಕಾರ್ಯಕಾರಿಣಿ, ಸಂಬಂಧಪಟ್ಟ ಇಲಾಖೆಗಳು ಹಾಗೂ ರಾಜ್ಯದ ರೈತ/ಸಮುದಾಯಗಳಿಗೆ ಬರ ಪರಿಸ್ಥಿತಿ ಪರಿಣಾಮಗಳನ್ನು ತಗ್ಗಿಸಲು ಅಗತ್ಯ ಮಾರ್ಗದರ್ಶನ ನೀಡುತ್ತದೆ. ಕೃಷಿ ಮಂತ್ರಾಲಯ, ಸಹಕಾರ ಮತ್ತು ರೈತರ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರವು ಬರ ಪರಿಸ್ಥಿತಿಯನ್ನು ನಿಖರವಾಗಿ ಗುರುತಿಸಲು ಹಲವು ಮಾನದಂಡಗಳನ್ನು ಗುರುತಿಸಿದ್ದು, ಸಕಾಲದಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಪರಿಷ್ಕೃತ ಬರ ನಿರ್ವಹಣೆ ಕೈಪಿಡಿ ಡಿಸೆಂಬರ್ 2020ನ್ನು ಹೊರತಂದಿದ್ದು, ಬರ ನಿರ್ಧರಣೆಗಾಗಿ ಕೆಳಕಂಡ ವೈಜ್ಞಾನಿಕ ಹಿನ್ನೆಲೆಯ ಮಾನದಂಡಗಳನ್ನು ನೀಡಲಾಗಿದ್ದು ಇವುಗಳನ್ನು ಅಧರಿಸಿ ಬರ ಪರಿಸ್ಥಿತಿಯನ್ನು ನಿರ್ಧರಿಸಲಾಗುತ್ತದೆ.

ಬರ ಪರಿಸ್ಥಿತಿ ನಿರ್ಧರಿಸಲು ಬಳಸಲಾಗುವ ಪ್ರಮುಖ ಮಾನದಂಡಗಳು

ಅ) ಮಳೆ ಕೊರತೆ (ಶೇ.60 ಕ್ಕೂ ಅಧಿಕ) : ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸ್ಥಾಪಿಸಲಾಗಿರುವ ಮಳೆಮಾಪನ ಕೇಂದ್ರಗಳಿಂದ ಪ್ರತಿ 15 ನಿಮಿಷಗಳಿಗೊಮ್ಮೆ ಕಲೆಹಾಕಲಾದ ಮಾಹಿತಿ ಅಧರಿಸಿ, ದೈನಂದಿನ/ವಾರ/ತಿಂಗಳು ಮತ್ತು ಋತುವಾರು ಮಳೆ ಕೊರತೆ ಕಂಡುಬರುವ ಪ್ರದೇಶಗಳನ್ನು ಜಿಲ್ಲೆ, ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಗುರುತಿಸಲಾಗುತ್ತಿದೆ.

ಆ) **ಶುಷ್ಕ ವಾತಾವರಣ (ಸತತ 3 ವಾರಗಳ ಶುಷ್ಕ ವಾತಾವರಣ) :** ರಾಜ್ಯದಲ್ಲಿನ ಮಳೆಪ್ರಮಾಣವನ್ನು ವಾಡಿಕೆ ಮಳೆ ಪ್ರಮಾಣಕ್ಕೆ ಹೋಲಿಸಿ ನೋಡಿದಾಗ ಶೇಕಡವಾರು ಮಳೆ ವ್ಯತ್ಯಾಸವನ್ನು ಆಧಾರಿಸಿ ರಾಜ್ಯದಲ್ಲಿ ವಾರಾಂತ್ಯದ ಶುಷ್ಕವಾತಾವರಣ ಕಂಡುಬರುವ ತಾಲ್ಲೂಕು ಮತ್ತು ಹೋಬಳಿವಾರು ಪ್ರದೇಶಗಳನ್ನು ಗುರುತಿಸಲಾಗುತ್ತಿದೆ ಹಾಗೂ ಮುಂಗಾರು ಮಾರುತಗಳ ವಿರಾಮ, ಪ್ರಾದೇಶಿಕ ಮಳೆಹಂಚಿಕೆ, ಮಳೆ ಕೊರತೆ, ಶುಷ್ಕವಾತಾವರಣ, ಮಳೆ ತೀವ್ರತೆಯನ್ನು ನಿರ್ಧರಿಸಲಾಗುತ್ತಿದೆ.

ಇ) **ಪ್ರಮಾಣಿತ ಮಳೆ ಸೂಚ್ಯಂಕ (SPI) :** ಐತಿಹಾಸಿಕ ಮಳೆ ದತ್ತಾಂಶಗಳನ್ನು ಆಧಾರಿಸಿ ಬರ ಪರಿಸ್ಥಿತಿಯ ತೀವ್ರತೆಯನ್ನು ನಿರ್ಧರಿಸಲು ಪ್ರಮಾಣಿತ ಮಳೆ ಸೂಚ್ಯಂಕವನ್ನು ಬಳಸಲಾಗುತ್ತಿದ್ದು, ಬರ ಪರಿಸ್ಥಿತಿಯ ವಿಸ್ತಾರತೆಯನ್ನು ತಿಳಿಯಲು ನೆರವಾಗುತ್ತದೆ.

ತೇವಾಂಶ ಕೊರತೆ ಸೂಚ್ಯಂಕ (MAI) : ಮಣ್ಣಿನ ತೇವಾಂಶವು ಬೆಳೆಗಳಿಗೆ ಅತೀ ಅಗತ್ಯವಾಗಿದ್ದು, ಬರ ಪರಿಸ್ಥಿತಿಗಳಲ್ಲಿ ಮಳೆ ಕೊರತೆ, ಶುಷ್ಕವಾತಾವರಣದಿಂದ ಮಣ್ಣಿನ ತೇವಾಂಶದಲ್ಲಿ ಕೊರತೆ ಕಂಡುಬಂದಲ್ಲಿ ಬೆಳೆನಾಶ, ಕಡಿಮೆ ಇಳುವರಿ ಇನ್ನಿತರ ಸಮಸ್ಯೆಗಳು

ತಲೆದೋರುತ್ತವೆ. ರಾಜ್ಯದಲ್ಲಿನ ಮಳೆ, ಹವಾಮಾನದ ಆಧಾರಿತ ಅಂಶಗಳನ್ನು ಆಧಾರಿಸಿ ತೇವಾಂಶ ಕೊರತೆ ಸೂಚ್ಯಂಕವನ್ನು ವಿಶ್ಲೇಷಿಸಿಲಾಗುತ್ತಿದ್ದು, ತೇವಾಂಶ ಕೊರತೆ ಸೂಚ್ಯಂಕವು ಬರ ಪರಿಸ್ಥಿತಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಉಪಗ್ರಹ ಆಧಾರಿತ ಸೂಚ್ಯಂಕ (Satellite Based Indices) : ಬರ ಪರಿಸ್ಥಿತಿಯ ನಿಖರತೆಯನ್ನು ದೃಡಪಡಿಸಲು ಉಪಗ್ರಹ ಆಧಾರಿತ ಸೂಚ್ಯಂಕಗಳನ್ನು ಬಳಸಲಾಗುತ್ತಿದ್ದು, ಬಿತ್ತನೆ ಪ್ರದೇಶ, ಬೆಳೆಗಳ ಬೆಳವಣಿಗೆ ಹಾಗೂ ಬೆಳೆಗಳ ಸ್ಥಿತಿಗತಿಗಳನ್ನು ತಿಳಿಯಲು ನೆರವಾಗುತ್ತವೆ, ಮುಖ್ಯವಾಗಿ ಉಪಗ್ರಹ ಆಧಾರಿತ ಸೂಚ್ಯಂಕಗಳ ಪೈಕಿ NDVI, NDWI & VCI ಗಳನ್ನು ಬರ ಪರಿಸ್ಥಿತಿಯನ್ನು ನಿರ್ಧರಿಸಲು ಮಾನದಂಡಗಳಾಗಿ ಉಪಯೋಗಿಸಲಾಗುತ್ತಿದೆ ಅಲ್ಲದೇ ಜಲ ಸಂಪನ್ಮೂಲ ಸೂಚ್ಯಂಕಗಳಾದ ಜಲಾಶಯ ಸಂಗ್ರಹಣೆ ಸೂಚ್ಯಂಕ (RSI), ಅಂತರ್ಜಲ ಬರ ಸೂಚ್ಯಂಕ (GWDI), ನದಿಗಳಲ್ಲಿನ ಹರಿವು ಸೂಚ್ಯಂಕ (SFDI) ಮುಂತಾದ ಅಂಶಗಳನ್ನು ಬರ ಪರಿಸ್ಥಿತಿಗಳ ಅನ್ವಯ ತಾಲ್ಲೂಕು ಮಟ್ಟದಲ್ಲಿ ಬರಕ್ಕೆ ತುತ್ತಾಗುವ ತಾಲ್ಲೂಕುಗಳನ್ನು ಗುರುತಿಸಲಾಗುತ್ತಿದೆ.

ರಾಜ್ಯದಲ್ಲಿನ ಹವಾಮಾನ/ಮಳೆಮಾಪನ ಕೇಂದ್ರಗಳಲ್ಲಿನ ದತ್ತಾಂಶಗಳನ್ನು ಆಧಾರಿಸಿ ಬರ ಪರಿಸ್ಥಿತಿ ನಿರ್ಧಾರಿಸಲಾಗುವ ಮಾನದಂಡಗಳನ್ವಯ ತಾಲ್ಲೂಕು ಮತ್ತು ಹೋಬಳಿ ಮಟ್ಟದ ಬರ ಪರಿಸ್ಥಿತಿಯನ್ನು ಗುರುತಿಸಲಾಗುತ್ತಿದೆ. ಬರ ನಿರ್ವಹಣೆ ಮತ್ತು ಬರ ಉಪಶಮನ ಕಾರ್ಯಗಳಿಗೆ ಸಂಬಂಧಿಸಿದಂತೆ, ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ, ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳೊಂದಿಗೆ ನಡೆಯುವ ಹವಾಮಾನ ಅವಲೋಕನ ಸಭೆಗಳನ್ನು ಕೈಗೊಂಡು ಹವಾಮಾನ ಪರಿಸ್ಥಿತಿ, ಬರ ಪರಿಸ್ಥಿತಿ ನಿರ್ವಹಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತು ಚರ್ಚಿಸಲಾಗುತ್ತಿದೆ. ಅಲ್ಲದೇ, ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಇಲಾಖೆಗಳೊಡನೆ ನಡೆಯುವ ರಾಜ್ಯ ಮಟ್ಟದ ಹವಾಮಾನ ಪರಿಸ್ಥಿತಿ ಪರಿಶೀಲನಾ ಸಭೆ ಮತ್ತು ರಾಜ್ಯ ಸಚಿವ ಸಂಪುಟ ಸಬೆಗಳಿಗೆ ರಾಜ್ಯದ ಬರ ಪರಿಸ್ಥಿತಿಯ ವಿವರವಾದ ಮಾಹಿತಿಗಳನ್ನು ನೀಡಲಾಗುತ್ತಿದ್ದು, ರಾಜ್ಯದಲ್ಲಿನ ಬರ ಪೀಡಿತ ಪ್ರದೇಶಗಳನ್ನು ವೈಜ್ಞಾನಿಕ ಆಧಾರಗಳ ಮೇಲೆ ಗುರುತಿಸುವುದು ಹಾಗೂ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (NDRF)ಯಡಿ ಬರ ಪರಿಸ್ಥಿತಿ ನಿರ್ವಹಣೆ ಮತ್ತು ಬರ ಉಪಶಮನ ಕಾರ್ಯಕ್ರಮಗಳಿಗೆ ಅಗತ್ಯವಾದ ಹಣಕಾಸು ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವ ಮನವಿ ಪ್ರಸ್ತಾವನೆಗಳಿಗೆ ನೆರವು ನೀಡಲಾಗುತ್ತಿದೆ.

ಪ್ರವಾಹ ಪರಿಸ್ಥಿತಿ ಉಸ್ತುವಾರಿ

ರಾಜ್ಯದಲ್ಲಿ ಪ್ರವಾಹ ಪರಿಸ್ಥಿತಿಯು ಸಹ ಸಾಮಾನ್ಯವಾಗಿದ್ದು, ರಾಜ್ಯದ ಕೃಷ್ಣ ಹಾಗೂ ಕಾವೇರಿ ನದಿ ಕಣಿವೆ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕಳೆದ ದಶಕದಲ್ಲಿ ಹಲವು ಬಾರಿ ತೀವ್ರ ಪ್ರವಾಹ ಪರಿಸ್ಥಿತಿಗೆ ತುತ್ತಾಗಿವೆ. ರಾಜ್ಯದ ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿನ ಅತ್ಯಧಿಕ ಮಳೆಯಿಂದ ತೀವ್ರ ಪ್ರವಾಹ ಹಾಗೂ ಭೂಕುಸಿತವು ಸಾಮಾನ್ಯವಾಗಿದೆ. ರಾಜ್ಯದ ಒಂದಲ್ಲ ಒಂದು ಭಾಗದಲ್ಲಿ ಪ್ರವಾಹ ಪರಿಸ್ಥಿತಿಯಿಂದಾಗಿ ಅಪಾರ ಪ್ರಮಾಣದ ಆಸ್ತಿಪಾಸ್ತಿ ನಷ್ಟ, ಜನ-ಜಾನುವಾರುಗಳ ಸಾವು, ಕೃಷಿ-ತೋಟಗಾರಿಕೆ ಬೆಳೆನಾಶ ಹಾಗೂ ಮೂಲಭೂತ ಸೌಕರ್ಯಗಳಿಗೆ ಹಾನಿಯುಂಟಾಗಿದೆ. ಇತೀಚಿನ ಪ್ರವಾಹ ತೀವ್ರತೆಯನ್ನು ಪರಿಗಣಿಸಿ ರಾಜ್ಯ ಸರ್ಕಾರವು ಈ ಕೇಂದ್ರದಲ್ಲಿ ಪ್ರವಾಹ ಪರಿಸ್ಥಿತಿಗೆ ಮೀಸಲಾದ ಪ್ರವಾಹ ಮುನ್ಸೂಚನೆ ಕೋಶವನ್ನು ಸ್ಥಾಪಿಸಿದ್ದು ಈ ಕೋಶವು ಮಳೆಮುನ್ಸೂಚನೆ ಹಾಗೂ ನದಿಗಳಲ್ಲಿನ ಹರಿವು ಪ್ರಮಾಣಿಕರಿಸಿ ಜಲಾಶಯಗಳ ಕೆಳಭಾಗದ ನದಿ ಪಾತ್ರದಲ್ಲಿರುವ ಗ್ರಾಮಗಳಿಗೆ ಪ್ರವಾಹ ಮುನ್ಸೂಚನೆಯನ್ನು ನೀಡುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ. ಮುಖ್ಯವಾಗಿ ರಾಜ್ಯದಲ್ಲಿ ಕೃಷ್ಣಾನದಿ ಪಾತ್ರದಲ್ಲಿ ಅಗಾಗ್ಗೆ ಉಂಟಾಗುವ ಪ್ರವಾಹ ಪರಿಸ್ಥಿತಿಯನ್ನು ಮನಗಂಡು ಕೃಷ್ಣಾನದಿ ಪಾತ್ರದಲ್ಲಿ ಪ್ರವಾಹ ಪೀಡಿತ ಪ್ರದೇಶಗಳನ್ನು ಗುರುತಿಸಿ ಕೃಷ್ಣಾನದಿ ಪಾತ್ರದ ಪ್ರಮುಖ 6 ಜಲಾಶಯಗಳಲ್ಲಿ ನೀರಿನಮಟ್ಟ ಮಾಪನಗಳು ಹಾಗೂ ನದಿಪಾತ್ರದಲ್ಲಿ ಹರಿವು ಪ್ರಮಾಣವನ್ನು ಅಳೆಯಲು ನೀರಿನ ಹರಿವು ಮಟ್ಟವನ್ನು ದಾಖಲಿಸಲು 9 ಸಂವೇಧಕಗಳನ್ನು ಸ್ಥಾಪಿಸಿದೆ. ಈ ಸಂವೇಧಕಗಳ ದತ್ತಾಂಶಗಳನ್ನು ಆಧಾರಿಸಿ ನಿಜ ಸಮಯದ ಪ್ರವಾಹ ಪರಿಸ್ಥಿತಿಗೆ ಅನುಗುಣವಾಗಿ ಕೃಷ್ಣಾನದಿ ಪ್ರವಾಹ ಮುನ್ಸೂಚನೆ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ.

ನಗರ ಪ್ರವಾಹ ಉಸ್ತುವಾರಿ

ಈ ಸಂಸ್ಥೆಯು ಬೆಂಗಳೂರು ನಗರ ಪ್ರವಾಹ ಪರಿಸ್ಥಿತಿಯನ್ನು ನಿರ್ವಹಿಸಲು ಸಂಯೋಜಿತ ನಗರ ಪ್ರವಾಹ ಮಾದರಿಯನ್ನು ಭಾರತೀಯ ವಿಜ್ಞಾನ ಸಂಸ್ಥೆ (IISc) ಸಹಯೋಗದಲ್ಲಿ ಅಭಿವೃದ್ಧಿಗೊಳಿಸಿದೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ 100 ಸೌರಶಕ್ತಿ ಆಧಾರಿತ ಜಿಪಿಎಸ್ ಸಹಿತ ಸ್ವಯಂಚಾಲಿತ ದೂರಸ್ಥ ಮಳೆಮಾಪನ ಕೇಂದ್ರಗಳು ಹಾಗೂ 12 ಹವಾಮಾನಮಾಪನ ಕೇಂದ್ರಗಳು ಹಾಗೂ ಪ್ರವಾಹ ಸಂಭವನೀಯ ಪ್ರದೇಶಗಳಲ್ಲಿನ ರಾಜಕಾಲೂವೆಗಳಲ್ಲಿ ಪ್ರವಾಹದ ಮಟ್ಟವನ್ನು ದಾಖಲಿಸಲು 26 ಸಂವೇದಕಗಳನ್ನು ಸ್ಥಾಪಿಸಲಾಗಿದೆ. ಬೆಂಗಳೂರು ನಗರ ಪ್ರವಾಹ ನಿರ್ವಹಣೆ ಮತ್ತು ಸಕಾಲದಲ್ಲಿನ ಪ್ರವಾಹಪೀಡಿತ ಪ್ರದೇಶ ಮತ್ತು ವ್ಯಾಪ್ತಿ ಹಾಗೂ ಸಂಬಂಧಪಟ್ಟ ಮಾಹಿತಿ ಪ್ರಸರಣೆಗಾಗಿ www.varunamitra.karnataka.gov.in ಅಂತರ್ಜಾಲ ತಾಣ ಅಭಿವೃದ್ಧಿಪಡಿಸಿದೆ. ಅಲ್ಲದೇ, ಬೆಂಗಳೂರು ನಗರ ಪ್ರವಾಹ ಪರಿಸ್ಥಿತಿಯಲ್ಲಿ ಸರ್ಕಾರಿ ಅಧಿಕಾರಿ ವರ್ಗ ಹಾಗೂ

ಸಾರ್ವಜನಿಕರಿಗೆ ಅನುಕೂಲವಾಗುವಂತೆ ಬೆಂಗಳೂರು “ಮೇಘಸಂದೇಶ” ಮೊಬೈಲ್ ಆಪ್‌ನ್ನು ಪರಿಚಯಿಸಲಾಗಿದೆ. ಈ ವ್ಯವಸ್ಥೆಯು 6-8 ಗಂಟೆ ಮುಂಚಿನ ನಗರ ಪ್ರವಾಹ ಪರಿಸ್ಥಿತಿಗಳ ನಿರ್ವಹಣೆಗಾಗಿ ಅಗತ್ಯವಾದ ಮುನ್ನೆಚ್ಚರಿಕೆ, ಸನ್ನದ್ಧತೆಗಳು, ವಾಹನ ಸಂಚಾರ ದಟ್ಟಣೆ ನಿಯಂತ್ರಣ ಹಾಗೂ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ನೆರವಾಗುತ್ತದೆ. ನಗರ ಪ್ರವಾಹ ನಿರ್ವಹಣೆ ಭಾಗವಾಗಿ ರಾಜ್ಯದ ಪ್ರಮುಖ ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಮತ್ತು ಮಂಗಳೂರು Smart City ನಗರಗಳಲ್ಲಿ ಪ್ರವಾಹ ಮುನ್ಸೂಚನೆ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದೆ.

ರಾಜ್ಯದಲ್ಲಿ ಸಿಡಿಲುಬಡಿತದಿಂದಲೂ ಸಹ ಜನ-ಜಾನುವಾರುಗಳ ಸಾವು ಹಾಗೂ ಅಪಾರ ಪ್ರಮಾಣದ ಆಸ್ತಿಪಾಸ್ತಿ ನಷ್ಟ ಹಾಗೂ ಮೂಲಭೂತ ಸೌಕರ್ಯಗಳಿಗೆ ಹಾನಿವುಂಟಾಗುತ್ತಿದ್ದು, ರಾಜ್ಯದಲ್ಲಿನ ಸಿಡಿಲು ಬಡಿತದಿಂದಾಗಬಹುದಾದ ನಷ್ಟವನ್ನು ತಗ್ಗಿಸಲು ಈ ಕೇಂದ್ರವು ರಾಜ್ಯದ ವಿವಿದೆಡೆ 11 ಸಿಡಿಲು ಸಂವೇದಕಗಳನ್ನು ಅಳವಡಿಸಿದ್ದು, ಈ ಸಂವೇದಕಗಳಿಂದ ನಿರ್ದಿಷ್ಟ ಸ್ಥಳದಲ್ಲಿ ಸಂಭವಿಸಬಹುದಾದ ಸಿಡಿಲು ಬಡಿತದ ಬಗ್ಗೆ ಮುನ್ನೆಚ್ಚರಿಕೆ ಸಂದೇಶಗಳನ್ನು ನೀಡಲು “ಸಿಡಿಲು” ಮೊಬೈಲ್ ಆಪ್ ಅಭಿವೃದ್ಧಿಪಡಿಸಿದೆ.

ಸಿಡಿಲುಬಡಿತ ಉಸ್ತುವಾರಿ

ರಾಜ್ಯದಲ್ಲಿ ಸಿಡಿಲು ಬಡಿತದಿಂದಾಗಿ ಪ್ರತಿವರ್ಷ ಆಸ್ತಿಪಾಸ್ತಿ ನಷ್ಟ ಮತ್ತು ಜೀವಹಾನಿಗಳು ಉಂಟಾಗುತ್ತಿದ್ದು, ಆಪಾರ ಜಾನುವಾರುಗಳ ಜೀವಹಾನಿ ಮತ್ತು ಮೂಲಭೂತ ಸೌಕರ್ಯಗಳ ಹಾನಿಯುಂಟಾಗುತ್ತಿದೆ. ಅಲ್ಲದೇ, ಸಿಡಿಲು ಬಡಿತದಿಂದಾಗಿ ತೋಟಗಾರಿಕೆ ಬೆಳೆಹಾನಿ ಹಾಗೂ ವಿದ್ಯುತ್‌ಸಂಪರ್ಕಗಳ ಹಾನಿಯು ಸಹ ಉಂಟಾಗುತ್ತಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಸ್ಥಳೀಯ ಮಟ್ಟದ ಸಿಡಿಲುಬಡಿತದ ಮುನ್ನೆಚ್ಚರಿಕೆ ನೀಡುವ ರಾಜ್ಯದಾದ್ಯಂತ 11 ಸಿಡಿಲುಬಡಿತ ಸಂವೇಧಗಳನ್ನು ಸ್ಥಾಪಿಸಿದೆ. ಸಿಡಿಲು ಬಡಿತ ಸಂವೇಧಕ ಜಾಲವು ರಾಜ್ಯದಲ್ಲಿನ ನೈಜ ಸಮಯದಲ್ಲಿನ ಮೋಡದಿಂದ ಮೋಡಗಳ (Cloud to Cloud -CC) ನಡುವೆ ಹಾಗೂ ಮೋಡದಿಂದ ನೆಲ/ಭೂಮಿಗೆ (Cloud to Ground- CG) ಅಪ್ಪಳಿಸುವ ಸಿಡಿಲು-ಗುಡುಗುಗಳನ್ನು ನಿಖರವಾಗಿ ದಾಖಲಿಸಿ, ಈ ದತ್ತಾಂಶಗಳನ್ನು ಅಧಾರಿಸಿ ರಾಜ್ಯದ ಸಂಬಂಧಪಟ್ಟ ಅಧಿಕಾರಿ ವರ್ಗ ಹಾಗೂ ರಾಜ್ಯದ ಜನಸಾಮಾನ್ಯರಿಗೂ ಸಿಡಿಲು ಮುನ್ನೆಚ್ಚರಿಕೆಗಳನ್ನು ನೀಡುತ್ತಿದೆ. ಅಲ್ಲದೇ ಸಿಡಿಲುಬಡಿತ ಮುನ್ನೆಚ್ಚರಿಕೆಗಳನ್ನು ಸಾಮಾನ್ಯ ಮುನ್ನೆಚ್ಚರಿಕೆ ವ್ಯವಸ್ಥೆಯಡಿ ರಾಜ್ಯದ ವಿಪತ್ತು ಪೀಡಿತ 104 ಗ್ರಾಮಪಂಚಾಯಿತಿಗಳಿಗೆ ನೀಡಲಾಗುತ್ತಿದ್ದು, ಸಿಡಿಲು ಬಡಿತದಿಂದಾಗುವ

ಅನಾಹುತಗಳನ್ನು ಸಂಪೂರ್ಣವಾಗಿ ತಗ್ಗಿಸಲು ಅಸಾಧ್ಯವಾದರೂ ಸಿಡಿಲು ಬಡಿತ ಮುನ್ನೆಚ್ಚರಿಕೆಗಳಿಂದ ಸಿಡಿಲು ಬಡಿತದಿಂದಾಗುವ ಹಾನಿಯನ್ನು ತಗ್ಗಿಸಬಹುದಾಗಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ 24*7 ಸಹಾಯವಾಣಿ "ವರುಣ ಮಿತ್ರ" ದಲ್ಲಿ ಲಭ್ಯವಿರುವ ಸುಮಾರು 28 ಲಕ್ಷ ರೈತರ ಮೊಬೈಲ್ ಸಂಖ್ಯೆಗಳಿಗೆ ಹಾಗೂ ಸಾರ್ವಜನಿಕರಿಗೆ ಸಿಡಿಲಿನ ಕುರಿತು ಮುನ್ನೆಚ್ಚರಿಕೆ ಹಾಗೂ ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ. ಕೇಂದ್ರವು ರಾಜ್ಯದ ಯಾವುದೇ ಭಾಗದಲ್ಲಿ ಸ್ಥಳ ನಿರ್ದಿಷ್ಟತೆಗೆ ಅನುಗುಣವಾಗಿ ನೈಜ ಸಮಯದಲ್ಲಿ ಸಂಭವಿಸುವ ಸಿಡಿಲು ಮಾಹಿತಿ ಮತ್ತು ಮುನ್ನೆಚ್ಚರಿಕೆಗಳನ್ನು ನೀಡುವ ಸಲುವಾಗಿ "ಸಿಡಿಲು" ಮೊಬೈಲ್ ತಂತ್ರಾಂಶವನ್ನು ಅಭಿವೃದ್ಧಿಗೊಳಿಸಿದೆ. ಸಿಡಿಲು ತಂತ್ರಾಂಶವು ಸಿಡಿಲುಬಡಿತದ ಸಮಯದಲ್ಲಿ ಕೈಗೊಳ್ಳಬಹುದಾದ ಮತ್ತು ಕೈಗೊಳ್ಳಬಾರದ ಕ್ರಮಗಳ ಮಾಹಿತಿಯು ಸೇರಿದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗುತ್ತದೆ.

"ಸಿಡಿಲು" ಮೊಬೈಲ್ ತಂತ್ರಾಂಶವು ರಾಜ್ಯದ ಯಾವುದೇ ಭಾಗದಲ್ಲಿ ಸ್ಥಳ ನಿರ್ದಿಷ್ಟತೆಗೆ ಅನುಗುಣವಾಗಿ ನೈಜ ಸಮಯದಲ್ಲಿ ಸಂಭವಿಸುವ ಸಿಡಿಲು ಮಾಹಿತಿಗಳನ್ನು ಒಳಗೊಂಡ ನಕ್ಷೆಯ ವಿಕ್ಷಣೆಯನ್ನು ನೀಡುತ್ತದೆ. ನಕ್ಷೆಯಲ್ಲಿ ಸಂಭಾವ್ಯ ಸಿಡಿಲು ಬಡಿತ ಪ್ರದೇಶಗಳಲ್ಲಿನ ಸುಮಾರು 15 ಕಿ.ಮೀ ಸುತ್ತಳತೆಯ ವ್ಯಾಪ್ತಿಯಲ್ಲಿ 1 ಕಿ.ಮೀ (ಕೆಂಪು -ತೀವ್ರ ಆಪಾಯ ವಲಯ) 5 ಕಿ.ಮೀ (ಕಿತ್ತಳೆ - ಮಧ್ಯಮ ಅಪಾಯ); ಹಾಗೂ 15 ಕಿ.ಮೀ (ಹಳದಿ - ಸುರಕ್ಷಿತ ವಲಯ) ತ್ರಿಜ್ಯಗಳನ್ನು ಒಳಗೊಂಡ ನಕ್ಷೆಯನ್ನು ಸೂಚಿಸುತ್ತದೆ ಹಾಗೂ ಬಳಕೆದಾರರು ಆಪಾಯ ವಲಯಗಳಲ್ಲಿ ಕಂಡುಬಂದಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಸಂದೇಶಗಳನ್ನು ರವಾನಿಸುತ್ತದೆ.

"ಸಿಡಿಲು" ಆ್ಯಪ್/ತಂತ್ರಾಂಶವು ಗೂಗಲ್ ಪ್ಲೇ ಸ್ಟೋರ್‌ನಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸಿಡಿಲು/ಗುಡುಗುಗಳ ಸಂಭವಿಸುವ 30 ರಿಂದ 45 ನಿಮಿಷಗಳ ಮುಂಚಿನ ಮುನ್ನೆಚ್ಚರಿಕೆಗಳನ್ನು ನೀಡುತ್ತದೆ. ತಂತ್ರಾಂಶದ ಬಳಕೆದಾರರು ತಾವಿರುವ ಸ್ಥಳದ ಒಂದು ಕಿ.ಮೀ ವ್ಯಾಪ್ತಿಯೊಳಗೆ ಸಿಡಿಲು-ಗುಡುಗು ಕಂಡುಬಂದಲ್ಲಿ ಶೇ. 90% ರಷ್ಟು ಸಂಭವನೀಯತೆ ಕಂಡುಬಂದಲ್ಲಿ ಬಳಕೆದಾರಿಗೆ ಅಪಾಯದ ವಲಯದಲ್ಲಿದ್ದಾರೆ ಎಂದು ಕೆಂಪು ಬಣ್ಣದ ಎಚ್ಚರಿಕೆಯನ್ನು ಸೂಚಿಸುತ್ತದೆ. ಕಿತ್ತಳೆ ಬಣ್ಣವು 5 ಕಿಮೀ ತ್ರಿಜ್ಯದಲ್ಲಿ ಮತ್ತು ಹಳದಿ 15 ಕಿಮೀ ತ್ರಿಜ್ಯದಲ್ಲಿ ಸಂಭವನೀಯ ಸಿಡಿಲುಗಳ ಮಾಹಿತಿಯನ್ನು ನೀಡುತ್ತದೆ.

ಭೂಕಂಪನಗಳ ಉಸ್ತುವಾರಿ

ಭೂಮಿಯ ಕಂಪಿಸುವಿಕೆ ಅಥವಾ ನಡುಗುವಿಕೆಯು ಮಾನವರಿಗೆ ಪ್ರಾಚೀನ ಕಾಲದಿಂದಲೂ ತಿಳಿದಿರುವ ಒಂದು ಸಾಮಾನ್ಯ ವಿದ್ಯಮಾನವಾಗಿದೆ. ಪ್ರತಿ ವರ್ಷ ಸುಮಾರು 500,000 ಭೂಕಂಪಗಳು ಸಂಭವಿಸುತ್ತವೆ ಎಂದು ಅಂದಾಜಿಸಲಾಗಿದ್ದು, ಕೆಲವು ಭೂಕಂಪನಗಳು ಮಾಪನದಲ್ಲಿ ದಾಖಲಾದರೇ, ಎಷ್ಟೋ ಭೂಕಂಪನಗಳು ಗಮನಕ್ಕೆ ಬರುವುದಿಲ್ಲ. ಭಾರತಖಂಡವು ಪ್ರತಿ ವರ್ಷ 5 ಸೆಂ.ಮೀ ನಷ್ಟು ಯುರೇಷಿಯನ್ ಭೂಖಂಡಗಳ ಕಡೆಗೆ ವಾಲುತ್ತಿದ್ದು, ಭೂಕಂಡಗಳ ಒಮ್ಮುಖ ಚಲನೆಯಿಂದಾಗಿ ಭಾರತಖಂಡದ ಭೂಭಾಗಗಳಲ್ಲಿ ತೀವ್ರ ಮತ್ತು ಮಧ್ಯಮ ಭೂಕಂಪನಗಳು ಹೆಚ್ಚಿನ ವಿರೂಪಗಳನ್ನು ಉಂಟುಮಾಡುತ್ತಿವೆ. ಭೌಗೋಳಿಕವಾಗಿ ಕರ್ನಾಟಕವು ಭಾರತದ ದಖ್ಖನ್ ಪ್ರಸ್ತಭೂಮಿಯ ಒಂದು ಭಾಗವಾಗಿದ್ದು, ಗಟ್ಟಿಯಾದ ಅಗ್ನಿಶಿಲೆಗಳಿಂದ ಅವೃತಗೊಂಡಿದ್ದು ಭೂಕಂಪನ ವಲಯ II ಮತ್ತು ಭೂಕಂಪನ ವಲಯ III ರಲ್ಲಿ ಕಂಡುಬರುತ್ತದೆ.

ರಾಜ್ಯದಲ್ಲಿ ಸಂಭವಿಸುವ ಭೂಕಂಪನಗಳ ಬಗ್ಗೆ ನಿಗಾ ವಹಿಸಲು ರಾಜ್ಯದಲ್ಲಿ 14 ಸೌರಶಕ್ತಿಚಾಲಿತ, ಉಪಗ್ರಹ ಆಧಾರಿತ, ಶಾಶ್ವತ ಭೂಕಂಪನಮಾಪನ ಕೇಂದ್ರಗಳನ್ನು ಸ್ಥಾಪಿಸಿದ್ದು, ಈ ಕೇಂದ್ರದ ವೈಜ್ಞಾನಿಕ ಸಿಬ್ಬಂದಿಗಳು ಭೂಕಂಪನಮಾಪನ ಕೇಂದ್ರಗಳಲ್ಲಿ ದಾಖಲಾಗುವ ನಿಜಸಮಯದಲ್ಲಿನ ಭೂಕಂಪನ ಸಂಬಂಧಿತ ದತ್ತಾಂಶಗಳನ್ನು ವಿಶ್ಲೇಷಿಸಿ, ಸ್ಥಳಿಯ ಮತ್ತು ಪ್ರಾದೇಶಿಕ ವಲಯಗಳಲ್ಲಿ ಸಂಭವಿಸುವ ಲಘು ಭೂಕಂಪನಗಳ ಬಗೆಗಿನ ಸಂಬಂಧಿತ ಮಾಹಿತಿಗಳು, ತಾಂತ್ರಿಕ ವರದಿಗಳು, ಟಿಪ್ಪಣಿಗಳನ್ನು ಹೆಚ್ಚಿನ ವಿಶ್ಲೇಷಣೆಗಾಗಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ವರ್ಗ ಹಾಗೂ ಜಲಾಶಯ ನಿರ್ವಹಣೆ ಪ್ರಾಧಿಕಾರಗಳಿಗೆ ನೀಡಲಾಗುತ್ತಿದೆ.

ಭೂಕಂಪನ ಮಾಪನಗಳ ದತ್ತಾಂಶ ವಿಶ್ಲೇಷಣೆ : ಭೂಕಂಪನ ಮಾಪನ ಕೇಂದ್ರಗಳಲ್ಲಿ ದಾಖಲಾದ ದತ್ತಾಂಶಗಳನ್ನು ನಿರಂತರವಾಗಿ ವಿಶ್ಲೇಷಣೆಗೊಳಪಡಿಸಲಾಗುತ್ತಿದ್ದು, ದಾಖಲಾದ ಭೂಕಂಪನ ಅಲೆಗಳನ್ನು ಲಂಬ ಮತ್ತು ಉದ್ದದ ಅಲೆಗಳು (Primary Waves) ಅಡ್ಡವಾದ ಅಲೆಗಳು (Secondary Waves) ಮತ್ತು ಮೇಲ್ಮೈ ಅಲೆ (Surface waves)ಗಳನ್ನು ಗುರುತಿಸಲಾಗುತ್ತದೆ ಹಾಗೂ ಭೂಕಂಪನಗಳು ಉಂಟಾದ ಕೇಂದ್ರ ಸ್ಥಾನದ ಅಕ್ಷಾಂಶ ಮತ್ತು ರೇಖಾಂಶಗಳು ಹಾಗೂ ಭೂಕಂಪನಗಳ ತೀವ್ರತೆ ಮತ್ತು ಭೂಕಂಪನ ಉಂಟಾದ ಆಳ ಮತ್ತು ಕೇಂದ್ರಸ್ಥಾನದಿಂದಾದ ಸ್ಥಾನಪಲ್ಲಟದ ವಿವರಗಳನ್ನೊಳಗೊಂಡ ವರದಿಯನ್ನು ಸಿದ್ದಪಡಿಸಲಾಗುತ್ತದೆ.

ಭೂಕಂಪನ ಮಾಹಿತಿ ಪ್ರಸರಣೆ: ರಾಜ್ಯದಲ್ಲಿ ಭೂಕಂಪನ ವರದಿಯಾದ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು, ಗ್ರಾಮ ಪಂಚಾಯಿತಿ, ಅಣೆಕಟ್ಟು ನಿರ್ವಹಣೆ ಪ್ರಾಧಿಕಾರಗಳಿಗೆ ಮಿಂಚಂಚೆ ಮತ್ತು ಸಂದೇಶಗಳನ್ನು ರವಾನಿಸಲಾಗುತ್ತದೆ ನಂತರ ಭೂಕಂಪನಗಳು ವರದಿಯಾದ ಪ್ರದೇಶದ ಭೂಭೌಗೋಳಿಕತೆ, ಭೂಕಂಪನ ಅಲೆಗಳ ವಿವರ, ಶಿಲಾ ರಚನೆ, ಭೂಕಂಪನ ಸಂದರ್ಭಗಳಲ್ಲಿ ಅನುಸರಿಸಬೇಕಾದ/ಅನುಸರಿಸಬಾರದ ಕ್ರಮಗಳನ್ನು ಒಳಗೊಂಡ ವರದಿಗಳನ್ನು ಕೇಂದ್ರದ ಅಂತರ್ಜಾಲ ತಾಣ www.ksndmc.org ದೈನಂದಿನ ವರದಿಯಲ್ಲಿಯು ಸಹ ನೀಡಲಾಗುತ್ತದೆ.

ಕೃಷ್ಣಾನದಿ ಪ್ರವಾಹ ಮುನ್ನೆಚ್ಚರಿಕೆ ನಿರ್ಧರಣಾ ವ್ಯವಸ್ಥೆ

ರಾಜ್ಯದ ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳು ಕೃಷ್ಣಾ ನದಿಪಾತ್ರದಲ್ಲಿ ಕಂಡುಬರುತ್ತವೆ. ಕಳೆದ 2005, 2009, 2019, 2020 ಮತ್ತು 2021, 2022ರಲ್ಲಿ ಕೃಷ್ಣಾ ನದಿಪಾತ್ರದಲ್ಲಿ ಉಂಟಾದ ಪ್ರವಾಹ ಪರಿಸ್ಥಿತಿಯಿಂದ ಆಪಾರ ಪ್ರಮಾಣದ ಕೃಷಿ, ತೋಟಗಾರಿಕೆ ಬೆಳೆಹಾನಿ, ಮೂಲಸೌಕರ್ಯಗಳ ಹಾನಿ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ನಷ್ಟವುಂಟಾಗಿದೆ.

ಕೃಷ್ಣಾ ನದಿಪಾತ್ರಗಳಲ್ಲಿ ಪ್ರವಾಹ ಪರಿಸ್ಥಿತಿಯಿಂದಾಗುವ ಜನ-ಜಾನುವಾರು ಜೀವಹಾನಿ, ಅಪಾರ ಪ್ರಮಾಣದ ಬೆಳೆಹಾನಿ, ಸಾರ್ವಜನಿಕ ಆಸ್ತಿಪಾಸ್ತಿ ಮತ್ತು ಮೂಲಭೂತ ಸೌಕರ್ಯಗಳ ನಷ್ಟವನ್ನು ಗಣನೀಯವಾಗಿ ತಗ್ಗಿಸಲು ಕೇಂದ್ರ ಕೃಷ್ಣಾನದಿ ಪಾತ್ರದಲ್ಲಿ ಪ್ರವಾಹ ಮುನ್ನೆಚ್ಚರಿಕೆ ನಿರ್ಧರಣಾ ವ್ಯವಸ್ಥೆಯನ್ನು ರೂಪಿಸಿದೆ. ಈ ವ್ಯವಸ್ಥೆಯಡಿ ಕೃಷ್ಣಾ ನದಿಪಾತ್ರದ ಸೂಕ್ತ ಸ್ಥಳಗಳಲ್ಲಿ ಹಾಗೂ ಜಲಾಶಯಗಳಲ್ಲಿ ನೀರಿನ ಮಟ್ಟವನ್ನು ಅಳೆಯುವ ರಾಡರ್ ಸಂವೇಧಕಗಳನ್ನು ಅಳವಡಿಸುವುದು. ಈ ಸಂವೇದಕಗಳ ಅಧಾರಿತ ದತ್ತಾಂಶಗಳ ವಿಶ್ಲೇಷಣೆಗಳನ್ನು ಕೈಗೊಂಡು ಜಲ-ವಿಜ್ಞಾನ ಆಧಾರಿತ ಪ್ರವಾಹ ನಿರ್ವಹಣೆ ಮತ್ತು ಮುನ್ನೆಚ್ಚರಿಕೆ ಮಾದರಿಗಳನ್ನು ಅಭಿವೃದ್ಧಿಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ವ್ಯವಸ್ಥೆಯಡಿ ಕೃಷ್ಣಾ ಪಾತ್ರದ ಪ್ರವಾಹ ಪೀಡಿತ ಪ್ರದೇಶಗಳಿಗೆ ಪ್ರವಾಹ ಮುನ್ನೆಚ್ಚರಿಕೆ, ಸಲಹೆ, ಸೂಚನೆ ಹಾಗೂ ನಿರ್ದೇಶನಗಳನ್ನು ನೀಡುವುದು ಹಾಗೂ ಪ್ರವಾಹ ಸಂದರ್ಭಗಳಲ್ಲಿ ಸಂಬಂಧಪಟ್ಟ ಜಿಲ್ಲಾಡಳಿತಗಳು ಮತ್ತು ಸಮುದಾಯಗಳಿಗೆ ಅಗತ್ಯ ಸನ್ನದ್ಧತೆ, ಮುಂಜಾಗ್ರತೆಗಾಗಿ ಮಾಹಿತಿ ಪ್ರಸರಣೆ ವ್ಯವಸ್ಥೆಯನ್ನು ಬಲಪಡಿಸುವ ಮೂಲಕ ಪ್ರವಾಹ ವಿಪತ್ತು ಅಪಾಯ ತಡೆ ಮತ್ತು ಕಡಿತಗೊಳಿಸಬಹುದಾಗಿದೆ.

ರಾಜ್ಯದ ಸ್ಮಾರ್ಟ್ ಸಿಟಿ (ಬೆಳಗಾವಿ, ಮಂಗಳೂರು, ಮತ್ತು ಹುಬ್ಬಳ್ಳಿ-ಧಾರವಾಡ) ವ್ಯಾಪ್ತಿಯಲ್ಲಿ ಹವಾಮಾನ ಮತ್ತು ಪ್ರವಾಹ ಉಸ್ತುವಾರಿ

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ರಾಜ್ಯದಲ್ಲಿ ಅನುಷ್ಠಾನಗೊಂಡಿರುವ ಸ್ಮಾರ್ಟ್ ಸಿಟಿ ವ್ಯಾಪ್ತಿಯಲ್ಲಿ 75 ಟೆಲಿಮೆಟ್ರಿಕ್ ಮಳೆಮಾಪನಗಳು, 29 ಟೆಲಿಮೆಟ್ರಿಕ್ ಹವಾಮಾನ ಮಾಪನಗಳು ಹಾಗೂ ಪ್ರವಾಹ ಪೀಡಿತ ಪ್ರದೇಶಗಳಲ್ಲಿನ ರಾಜಕಾಲೂವೆಗಳಲ್ಲಿನ ಪ್ರವಾಹ ಸಂದರ್ಭಗಳಲ್ಲಿ ನೀರಿನ ಮಟ್ಟವನ್ನು ದಾಖಲಿಸಲು 50 ಸಂವೇಧಗಳನ್ನು ಸ್ಥಾಪಸಿದೆ.

ಈ ಎಲ್ಲಾ ಕೇಂದ್ರಗಳ ಮಾಹಿತಿಗಳನ್ನು ಸ್ಮಾರ್ಟ್ ಸಿಟಿ ವ್ಯಾಪ್ತಿಯಲ್ಲಿ ಸಕಾಲದ ಹವಾಮಾನ ಮಾಹಿತಿ ಪ್ರಸರಣೆ, ಪ್ರವಾಹ ಪರಿಸ್ಥಿತಿ, ಪ್ರವಾಹ ಮುನ್ಸೂಚನೆ ಮತ್ತು ಮುನ್ನೆಚ್ಚರಿಕೆ, ನೈಜ ಸಮಯದದಲ್ಲಿನ ಮಳೆನಕ್ಷೆ, ಪ್ರವಾಹಕ್ಕೆ ತುತ್ತಾದ ಪ್ರದೇಶ ಮತ್ತು ರಸ್ತೆಗಳ ವಿವರ, ಸುರಕ್ಷಿತ ರಸ್ತೆ ಮಾರ್ಗಗಳು, ಪ್ರವಾಹ ಪರಿಸ್ಥಿತಿಯ್ಲಲಿ ಕೈಗೊಳ್ಳಬೇಕಾದ ಕ್ರಮಗಳು ಹಾಗೂ ನಗರ ಪ್ರದೇಶದ ತುರ್ತು ಸೇವೆ ಹಾಗೂ ತುರ್ತು ಕಾರ್ಯಚರಣೆ ತಂಡಗಳನ್ನು ಸಂಪರ್ಕಿಸಲು ಅನುಕೂಲವಾಗುವ ಮೊಬೈಲ್ ಆ್ಯಪ್ ಮತ್ತು ಅಂತರ್ಜಾಲತಾಣವನ್ನು ಅಭಿವೃದ್ಧಿಗೊಳಿಸಿದೆ. ಸಕಾಲದಲ್ಲಿ ಲಭ್ಯವಾಗುವ ಹವಾಮಾನ ಆಧಾರಿತ ಮಾಹಿತಿ ಹಾಗೂ ಪ್ರವಾಹ ಮುನ್ನೆಚ್ಚರಿಕೆ, ಸಲಹೆ ಸೂಚನೆಗಳು ವಿಪತ್ತು ಅಪಾಯ ಕಡಿತಗೊಳಿಸಲು ನೆರವಾಗಲಿದೆ.

ಬಹು ಅಯಾಮ ವಿಪತ್ತು ಮುನ್ನೆಚ್ಚರಿಕೆ ಪ್ರಸರಣೆ ವ್ಯವಸ್ಥೆ

ರಾಜ್ಯದಲ್ಲಿ ವಿವಿಧ ನೈಸರ್ಗಿಕ ವಿಪತ್ತುಗಳಾದ ಪ್ರವಾಹ, ಬರ, ಆಲಿಕಲ್ಲು, ಸಿಡಿಲು ಬಡಿತ, ಆಲಿಕಲ್ಲು ಮಳೆ, ಬಿಸಿಗಾಳಿ ಪರಿಣಾಮಗಳಿಂದ ಆಪಾರ ಪ್ರಮಾಣದ ಜನ-ಜಾನುವಾರುಗಳ ಜೀವಹಾನಿ, ಸಾರ್ವಜನಿಕ ಆಸ್ತಿಪಾಸ್ತಿ ನಷ್ಟ ಹಾಗೂ ಮೂಲಸೌಕರ್ಯಗಳ ಹಾನಿವುಂಟಾಗುತ್ತಿದ್ದು, ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಮುಖ್ಯವಾಗಿ ವಿಪತ್ತು ಪೀಡಿತ ಪ್ರದೇಶಗಳಲ್ಲಿನ ಬಡವರು ಮತ್ತು ದುರ್ಬಲ ವರ್ಗದ ಮೇಲೆ ಘಾಢ ಪರಿಣಾಮವನ್ನುಂಟು ಮಾಡುತ್ತಿದೆ.

ವಿಪತ್ತು ಮುನ್ನೆಚ್ಚರಿಕೆಯು ವಿಪತ್ತು ಸನ್ನದ್ದತೆ ಅಗತ್ಯವಾದ ಸಮಯವನ್ನು ಒದಗಿಸುವ ಮೂಲಕ ವಿಪತ್ತು ಅಪಾಯ ಮತ್ತು ಪರಿಣಾಮಗಳನ್ನು ತಡೆಗಟ್ಟಲು ಅತ್ಯಂತ ಪರಿಣಾಮಕಾರಿಯಾಗಿದ್ದು, ವಿಪತ್ತುಗಳಿಂದಾಗುವ ಜೀವಹಾನಿ, ಆಸ್ತಿಪಾಸ್ತಿ ನಷ್ಟಗಳನ್ನು ಕಡಿತಗೊಳಿಸುತ್ತದೆ. ಈ ವ್ಯವಸ್ಥೆಯು ವಿಪತ್ತುಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಣೆ ಮತ್ತು

ಮಾಹಿತಿ ಪ್ರಸರಣೆಯನ್ನು ಒಳಗೊಂಡಿದ್ದು, ವಿಪತ್ತುಗಳ ಸಂದರ್ಭಗಳಲ್ಲಿ ಮುನ್ನೆಚ್ಚರಿಕೆ ಮತ್ತು ಸಲಹೆ ಸೂಚನೆಗಳನ್ನು ನೀಡುತ್ತದೆ.

ಗ್ರಾಮೀಣ ಪ್ರದೇಶಗಳ ಕಟ್ಟಕಡೆಯ ಸಮುದಾಯಗಳ ರಕ್ಷಣೆಯು ಪ್ರಥಮ ಅದ್ಯತೆಯಾಗಿದ್ದು, ವಿಪತ್ತುಗಳಿಂದಾಗುವ ಹಾನಿ ಮತ್ತು ನಷ್ಟಗಳನ್ನು ತಗ್ಗಿಸಲು ವಿಪತ್ತು ಮುನ್ನೆಚ್ಚರಿಕೆ ಸೇವೆಯು ಅತ್ಯಂತ ಪ್ರಮುಖವಾಗಿದ್ದು, ವಿಪತ್ತು ನಂತರದ ಹಾನಿ ಮತ್ತು ನಷ್ಟ, ಸಂತ್ರಸ್ಥರ ಸ್ಥಳಾಂತರ ಹಾಗೂ ಪರಿಹಾರ ಕ್ರಮಗಳಿಗೆ ತಗಲುವ ವೆಚ್ಚಗಳಿಗೆ ಸಂಬಂದಿಸಿದಂತೆ ರಾಜ್ಯದ ಆರ್ಥಿಕ ಹೊರೆಯನ್ನು ತಗ್ಗಿಸುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರವು ಬಹು ಅಯಾಮ ವಿಪತ್ತು ಮುನ್ನೆಚ್ಚರಿಕೆ ಪ್ರಸರಣೆ ವ್ಯವಸ್ಥೆ ಯೋಜನೆಯನ್ನು ರೂಪಿಸಿದೆ.

ಕೇಂದ್ರಿಕೃತ ವೈರ್‌ಲೆಸ್ ಸಾರ್ವಜನಿಕ ಮುನ್ನೆಚ್ಚರಿಕೆ ಮತ್ತು ಪ್ರಸರಣೆ ವ್ಯವಸ್ಥೆ

ಸಾರ್ವಜನಿಕ ಮುನ್ನೆಚ್ಚರಿಕೆಯು ವಿಪತ್ತುಗಳಿಗೆ ಅಗತ್ಯವಾದ ಸನ್ನದ್ಧತೆ, ಮುಂಜಾಗ್ರತೆಗಳನ್ನು ಕೈಗೊಂಡು ವಿಪತ್ತು ಪರಿಣಾಮಗಳನ್ನು ಕಡಿತಗೊಳಿಸುವಲ್ಲಿ ಅತ್ಯಂತ್ಯ ಪ್ರಮುಖ ಪಾತ್ರ ವಹಿಸುತ್ತದೆ. ನೈಸರ್ಗಿಕ ವಿಪತ್ತುಗಳಾದ ಬರ, ಪ್ರವಾಹ, ಚಂಡಮಾರುತ, ಸುನಾಮಿ, ಆಲಿಕಲ್ಲು ಮತ್ತು ಇತರೆ ವಿಪತ್ತುಗಳಿಗೆ ವಿಭಿನ್ನವಾದ ಮುನ್ನೆಚ್ಚರಿಕೆ ವ್ಯವಸ್ಥೆಗಳು ಅನುಷ್ಠಾನದಲ್ಲಿದ್ದು, ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವುದರಿಂದ ಆಡಳಿತಗಳು ಮತ್ತು ಜನ ಸಮುದಾಯವು ವಿಪತ್ತುಗಳಿಂದಾಗ ಬಹುದಾದ ನಷ್ಟ ಮತ್ತು ಹಾನಿಗಳನ್ನು ಗಣನೀಯವಾಗಿ ತಗ್ಗಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸಮುದಾಯಗಳಿಗೆ ವಿಪತ್ತಿನ ಸಂದರ್ಭಗಳಲ್ಲಿ ಅಗತ್ಯವಾದ ವಿಶ್ವಾರ್ಹ ಮಾಹಿತಿ ಮತ್ತು ಮುನ್ನೆಚ್ಚರಿಕೆಗಳು ಹಾಗೂ ವಿಪತ್ತುಗಳ ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ಕಾರ್ಯಚರಣೆಗಳನ್ನು ಪ್ರಚುರಪಡಿಸುವುದು ಅತ್ಯಗತ್ಯವಾಗುತ್ತದೆ.

ಕೇಂದ್ರಿಕೃತ ವೈರ್‌ಲೆಸ್ ಸಾರ್ವಜನಿಕ ಮುನ್ನೆಚ್ಚರಿಕೆ ಮತ್ತು ಪ್ರಸರಣೆ ವ್ಯವಸ್ಥೆಯಡಿ ವಿಪತ್ತು ಮುನ್ನೆಚ್ಚರಿಕೆಯನ್ನು ನೀಡಲು ಪ್ರಾಯೋಗಿಕವಾಗಿ ರಾಜ್ಯದ 104 ಪ್ರವಾಹ ಪೀಡಿತ ಗ್ರಾಮ ಪಂಚಾಯಿತಿಗಳಲ್ಲಿ ಸ್ಥಾಪಿಸಲು ನಿರ್ಧರಿಸಲಾಗಿದ್ದು ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಮಾಹಿತಿಗಳನ್ನೊಳಗೊಂಡ ಮಾಹಿತಿ ಏಕಕಾಲದಲ್ಲಿ ರವಾನಿಸಲು ಕ್ರಮ ಕೈಗೊಂಡಿದೆ ಮತ್ತು ಕೇಂದ್ರಿಕೃತ ವೈರ್‌ಲೆಸ್ ಸಾರ್ವಜನಿಕ ಮುನ್ನೆಚ್ಚರಿಕೆ ಮತ್ತು ಪ್ರಸರಣೆ ವ್ಯವಸ್ಥೆಯಡಿ ಅಭಿವೃದ್ದಿ ಪಡಿಸಿರುವ ತಂತ್ರಾಂಶವು ಮುನ್ನೆಚ್ಚರಿಕೆಗೆ ಸಂಬಂಧಿಸಿದ ಮಾಹಿತಿಗಳ ಸಂಗ್ರಹಣೆ, ರವಾನೆ, ಪ್ರಸರಣೆ, ಸಂದೇಶಗಳು ಹಾಗೂ ಸ್ವಯಂಚಾಲಿತ ಧ್ವನಿಮುದ್ರಿತ ಸಂದೇಶಗಳನ್ನು ಸಂಬಂಧಪಟ್ಟ ವಿಪತ್ತುಗಳಿಗೆ ಅನ್ವಯವಾಗುವಂತೆ ಪ್ರಸರಿಸಲು ಅನುಕೂಲವಾಗುವಂತೆ ರೂಪಿಸಲಾಗಿದೆ.

ಈ ವ್ಯವಸ್ಥೆಯಡಿ ರಾಜ್ಯದ ಹವಾಮಾನ ಸಂಬಂಧಿತ ಮಾಹಿತಿ, ವಿಪತ್ತು ಮುನ್ನೆಚ್ಚರಿಕೆಗಳು, ಬರ ನಿರ್ವಹಣೆ ಹಾಗೂ ಸಾರ್ವಜನಿಕ ಮಾಹಿತಿ ಹಾಗೂ ಸರ್ಕಾರದ ಸಾರ್ವಜನಿಕ ಮಾಹಿತಿಗಳನ್ನು ರಾಜ್ಯಮಟ್ಟದ ತುರ್ತು ಕಾರ್ಯಚಾರಣೆ ಕೇಂದ್ರದಿಂದ ಕೇಂದ್ರಿಕೃತ ಮಾಹಿತಿ ನಿಯಂತ್ರಣ ಹಾಗೂ ನಿರ್ವಹಣಾ ವ್ಯವಸ್ಥೆಯು ಜಿಪಿಆರ್ಎಸ್ ತಂತ್ರಜ್ಞಾನ ಆಧಾರಿತ ಧ್ವನಿಮುದ್ರಿತ ಸಂದೇಶಗಳನ್ನು ನೇರವಾಗಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಲ್ಲಿ ಧ್ವನಿವರ್ಧಕಗಳನ್ನು ಸ್ಥಾಪಿಸಿ ಪಂಚಾಯಿತಿ ವ್ಯಾಪ್ತಿಯ 1.5 ಕಿ.ಮೀ ಗೆ ಅನ್ವಯವಾಗುವಂತೆ ಮುನ್ನೆಚ್ಚರಿಕೆಗಳನ್ನು ನೀಡುವ ಸೌಲಭ್ಯಗಳನ್ನು ಹೊಂದಿದೆ.

ವಿಮೆ ಸೌಲಭ್ಯಗಳಿಗೆ ನೆರವು

ಕೇಂದ್ರವು ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಹವಾಮಾನ ಅಧಾರಿತ ಬೆಳೆವಿಮೆ ಯೋಜನೆಗೆ ನೆರವಾಗುತ್ತಿದೆ. ಕೇಂದ್ರದಲ್ಲಿ ಲಭ್ಯವಿರುವ ದತ್ತಾಂಶಗಳನ್ನು ಅಧಾರಿಸಿ ಬೆಳೆವಿಮೆ ಯೋಜನೆಗೆ ಸಂಬಂಧಿಸಿದಂತೆ ನಿರ್ಧಿಷ್ಟ ಸ್ಥಳ ಮತ್ತು ನಿರ್ಧಿಷ್ಟ ಬೆಳೆ ಆಧಾರಿತ ಟರ್ಮ್‌ಶೀಟ್‌ಗಳನ್ನು ವಿನ್ಯಾಸಗೊಳಿಸುವುದು ಹಾಗೂ ವಿವಿಧ ಕೃಷಿ ಹಂತಗಳಲ್ಲಿ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದಾಗುವ ಬೆಳೆ ನಷ್ಟಗಳಿಗೆ ಕಾರಣವಾಗುವ ಹವಾಮಾನ ಅಂಶಗಳನ್ನು ನಿಗದಿಪಡಿಸುವುದು ಹಾಗೂ ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಹವಾಮಾನ/ಮಳೆಮಾಪನ ಕೇಂದ್ರಗಳ ಜಾಲದಿಂದ ಸಂಗ್ರಹಿಸಿದ ಸಕಾಲಿಕ ದತ್ತಾಂಶಗಳನ್ನು ಆಧಾರಿಸಿ ರೈತ/ಜನಸಮುದಾಯವು ಹವಾಮಾನ ಸಂಬಂಧಿತ ವೈಪರೀತ್ಯಗಳಿಂದಾದ ನಷ್ಟಕ್ಕೆ ವಿಮೆ ಪಡೆಯಲು ಕೇಂದ್ರವು ನೆರವಾಗುತ್ತಿದೆ. ಅಲ್ಲದೇ, ಸಿಡಿಲು ಬಡಿತ, ಬಿರುಗಾಳಿ, ಅತೀವೃಷ್ಟಿ ಹಾಗೂ ಇತರೆ ಹವಾಮಾನ ವೈಪರೀತ್ಯಗಳಿಂದಾಗುವ ಸಾರ್ವಜನಿಕ ಆಸ್ತಿಪಾಸ್ತಿ ನಷ್ಟ ಮತ್ತು ಹಾನಿಗಳಿಗೆ ಸಂಬಂಧಿಸಿದಂತೆ ವಿಮೆ ಸೌಲಭ್ಯಗಳನ್ನು ಪಡೆಯಲು ಸ್ಥಳ ನಿರ್ಧಿಷ್ಟತೆಗೆ ಅನುಗುಣವಾಗಿ ಕೇಂದ್ರವು ದತ್ತಾಂಶ ಪೂರೈಕೆ ಸೇವೆಗಳನ್ನು ಒದಗಿಸುತ್ತಿದೆ.

ಕೇಂದ್ರದ ಮಾಹಿತಿ ಪ್ರಸರಣ ವ್ಯವಸ್ಥೆ

ವಿಪತ್ತು ಪರಿಣಾಮಗಳನ್ನು ತಗ್ಗಿಸುವಲ್ಲಿ ಮಾಹಿತಿ ಪ್ರಸರಣ ವ್ಯವಸ್ಥೆಯು ಪ್ರಮುಖವಾಗಿದ್ದು ಈ ಕೇಂದ್ರವು ನಿಜಸಮಯದ ಸ್ಥಳೀಯ ಹವಾಮಾನ/ಮಳೆಮಾಪನ ಕೇಂದ್ರಗಳಲ್ಲಿನ ದತ್ತಾಂಶಗಳು, ಹವಾಮಾನ ಮುನ್ಸೂಚನೆ, ನಿರ್ಧಿಷ್ಟ ಸ್ಥಳಕ್ಕನುಗುಣವಾಗಿ ಹವಾಮಾನ ಸಂಬಂಧಿತ ಕೃಷಿ ಸಲಹೆ ಹಾಗೂ ನೈಸರ್ಗಿಕ ವಿಪತ್ತುಗಳಿಗೆ ಸಂಬಂಧಿಸಿದ ಮುನ್ನೆಚ್ಚರಿಕೆ ಸಂದೇಶಗಳು, ಸಲಹೆ ಸೂಚನೆಗಳನ್ನು ಸರ್ಕಾರದ ವಿವಿಧ ಇಲಾಖೆಯ ಅಧಿಕಾರಿ ವರ್ಗ ಹಾಗೂ ಜನಸಮುದಾಯಕ್ಕೆ ನಿರಂತರವಾಗಿ ನೀಡಲಾಗುತ್ತಿದೆ. ಇದರಿಂದ ವಿಕೋಪಗಳಿಂದಾಗುವ ನಷ್ಟವನ್ನು/ಪರಿಣಾಮವನ್ನು ಉಪಶಮನ/ತಡೆಗಟ್ಟಲು ಮಾಡಲು

ಸಹಕಾರಿಯಾಗಿದೆ.

ಈ ಕೇಂದ್ರವು ದತ್ತಾಂಶ ನಿರ್ವಹಣೆ ಹಾಗೂ ಮಾಹಿತಿ ಪ್ರಸರಣ ವ್ಯವಸ್ಥೆಯನ್ನು ಸ್ವಯಂಚಾಲಿತಗೊಳಿಸಲಾಗಿದ್ದು, ಸುಧಾರಿತ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿದ್ದು, ನೈಸರ್ಗಿಕ ವಿಪತ್ತುಗಳು ಹಾಗೂ ಕೃಷಿ ಅಭಿವೃದ್ಧಿಗೆ ಸಂಬಂಧಿಸಿದ ಮಾಹಿತಿಗಳನ್ನು ಕೇಂದ್ರದ ಅಂತರ್ಜಾಲ ತಾಣ, ಸಹಾಯವಾಣಿ, ಆಕಾಶವಾಣಿ, ಉಪಗ್ರಹ ಆಧಾರಿತ ಸಂಪರ್ಕಗಳ ಮುಖಾಂತರ ನಿರ್ದಿಷ್ಟಸ್ಥಳ ಮಾಹಿತಿಗಳನ್ನು ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆಕೃಷಿ, ಮೀನುಗಾರಿಕೆ, ಸಾರಿಗೆ, ಜಲ ಸಂಪನ್ಮೂಲ ಇಲಾಖೆ, ವಿದ್ಯುತ್ ಸಂಪರ್ಕ, ವಿಪತ್ತು ನಿರ್ವಹಣೆ, ಇಲಾಖೆಗಳಿಗೆ ಮತ್ತು ರೈತ ಸಂಪರ್ಕ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ, ಹಾಗೂ ಪತ್ರಿಕೆ ಹಾಗೂ ದೃಶ್ಯ ಮಾದ್ಯಮಗಳಿಗೆ ನೀಡಲಾಗುತ್ತಿದೆ.

ಕೇಂದ್ರದ ಮಾಹಿತಿ ವಿನಿಮಯ ವ್ಯವಸ್ಥೆಯು ವಿಪತ್ತು ಅಪಾಯ ತಗ್ಗಿಸುವಿಕ್ಕೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿದ್ದು, ವಿಪತ್ತು ಸಂದರ್ಭಗಳಲ್ಲಿ ವಿಪತ್ತು ಮುನ್ನೆಚ್ಚರಿಕೆ, ಸನ್ನದ್ಧತೆಗಳು, ಸಲಹೆ ಸೂಚನೆಗಳು ನೀಡಲು ನೆರವಾಗುತ್ತಿದೆ. ಅಲ್ಲದೇ ಕೇಂದ್ರದ ಮಾಹಿತಿಗಳು ರಾಜ್ಯದ ಬರ ಪರಿಸ್ಥಿತಿ ನಿರ್ವಹಣೆ, ಜಲ ಸಂಪನ್ಮೂಲ ನಿರ್ವಹಣೆ,ಮತ್ತು ವಿದ್ಯುತ್ ಉತ್ಪಾಧನೆ, ಬೆಳೆಹಾನಿ ಸಮೀಕ್ಷೆಗಳು ಹಾಗೂ ಬೆಳೆವಿಮೆ ಯೋಜನೆಗಳಿಗೆ ನೆರವಾಗುತ್ತಿದ್ದು, ಹವಾಮಾನ ಆಧಾರಿತ ಕೃಷಿ, ಬೆಳೆಹಾನಿ ನಷ್ಟ ಹಾಗೂ ವಿಪತ್ತು ಸಂದರ್ಭಗಳಲ್ಲಿ ಮೂಲಭೂತ ಸೌಕರ್ಯಗಳ ಹಾನಿ ಮತ್ತು ನಷ್ಟಗಳನ್ನು ತಗ್ಗಿಸಲು ಸಹಾಯವಾಗುತ್ತಿದೆ.

ಸಂವಾದತ್ಮಕ "ವರುಣ ಮಿತ್ರ" ಸಹಾಯವಾಣಿ

ಹವಾಮಾನ ಅಧಾರಿತ ಬೇಸಾಯ ಕ್ರಮಗಳ ಮೂಲಕ ಹೆಚ್ಚಿನ ಇಳುವರಿ, ಸೂಕ್ತ ಬೆಳೆ ಪದ್ಧತಿಗಳು, ನೀರಾವರಿ ಹಾಗೂ ವಿಪತ್ತುಗಳಿಂದಾಗುವ ಬೆಳೆಹಾನಿ ನಷ್ಟ ತಗ್ಗಿಸುವಿಕೆ ಅಗತ್ಯವಾದ ಸಕಾಲದಲ್ಲಿನ ನಿಖರ ಹವಾಮಾನ ಅಧಾರಿತ ಮಾಹಿತಿ, ಮುನ್ಸೂಚನೆ, ಕೃಷಿ ಸಂಬಂಧಿತ ಸಲಹೆ ಸೂಚನೆಗಳ ಲಭ್ಯತೆಯಲ್ಲಿ ಕೊರತೆಯನ್ನು ಮನಗಂಡು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಹವಾಮಾನ ಮಾಹಿತಿ, ಕೃಷಿ ಆಧಾರಿತ ಸಲಹೆ, ಸೂಚನೆಗಳನ್ನು ನೀಡಲು ಅನನ್ಯ ಮಾದರಿ ವ್ಯವಸ್ಥೆಯೊಂದಿಗೆ ನೂತನ ಪರಿಕಲ್ಪನೆಗಳನ್ನು ಅಳವಡಿಸಿಕೊಂಡು ರಾಜ್ಯದ ರೈತರು, ಜನಸಾಮಾನ್ಯರ ಅಗತ್ಯಕ್ಕೆ ತಕ್ಕಂತೆ ಹವಾಮಾನ ಮಾಹಿತಿಗಳನ್ನು ನೀಡಲು "ವರುಣ ಮಿತ್ರ" ಸಹಾಯವಾಣಿಯನ್ನು ರೂಪಿಸಿದೆ.

ವೈಜ್ಞಾನಿಕವಾಗಿ ಸಂಗ್ರಹಿಸಿದ ಹವಾಮಾನ ಮಾಹಿತಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಹವಾಮಾನ ಮುನ್ಸೂಚನೆಯನ್ನು ನೇರವಾಗಿ ಜನಸಾಮಾನ್ಯರಿಗೆ ತಲುಪಿಸಲುವ ಸಲುವಾಗಿ ಈ ಕೇಂದ್ರವು 24X7 ಸಹಾಯವಾಣಿ "ವರುಣ ಮಿತ್ರ" ಸಹಾಯವಾಣಿಯನ್ನು

ಕರ್ಯಗತಗೊಳಿಸಿದ್ದು ಈ ಸಹಾಯವಾಣಿಯ ದೂರವಾಣಿ 92433 45433 ಗೆ ಜನಸಾಮಾನ್ಯರು ಅದರಲ್ಲೂ ರೈತರು ಕರೆ ಮಾಡಿ ತಮ್ಮ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ ಹವಾಮಾನ ಮಾಹಿತಿ ಮತ್ತು ಮುನ್ಸೂಚನೆಯನ್ನು ಪಡೆದುಕೊಳ್ಳುತ್ತಿದ್ದಾರೆ. ರೈತ ಮತ್ತು ಜನಸಮುದಾಯಕ್ಕೆ ವೈಜ್ಞಾನಿಕ ಮಾಹಿತಿ, ಸಲಹೆ, ಸೂಚನೆಯನ್ನು ನೇರವಾಗಿ ನೀಡುವುದರಿಂದ ನೈಸರ್ಗಿಕ ವಿಕೋಪಗಳಿಂದ ಸಂಭವಿಸಬಹುದಾದ ಸಂಭವನೀಯ ನಷ್ಟವನ್ನು ತಗ್ಗಿಸುವುದರ ಜೊತೆಗೆ ಮುಂಜಾಗ್ರತ ಕ್ರಮ ಕೈಗೊಳ್ಳಲು ಸಹಾಯವಾಗುತ್ತಿದೆ.

"ವರುಣ ಮಿತ್ರ" - 24X7 ಸಹಾಯವಾಣಿ ಜನ ಸಮುದಾಯದಿಂದ ಭಾರಿ ಪ್ರಶಂಸೆಗೆ ಕಾರಣವಾಗಲು ಕೆಳಕಂಡ ಅಂಶಗಳನ್ನು ಒಳಗೊಂಡಿದೆ.

- ಸಾಮಾನ್ಯ ಜನರಿಗೆ ತಿಳಿಯುವಂತೆ ಸರಳ ಭಾಷೆಯಲ್ಲಿ ಹವಾಮಾನ ಮಾಹಿತಿಯನ್ನು ನೀಡಲಾಗುತ್ತಿದೆ.
- ನಿಖರ ಮಾಹಿತಿ ಸಕಾಲದಲ್ಲಿ ದೊರೆಯುತ್ತಿರುವುದು ರೈತ-ಜನ ಸಮುದಾಯದಲ್ಲಿ ವಿಶ್ವಾಸ ಹೆಚ್ಚಿಸಿದೆ.
- ಜನ ಸಮುದಾಯವು ವಿಜ್ಞಾನಿಗಳೊಂದಿಗೆ ನೇರವಾಗಿ ಸಂವಾದಿಸಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಮಳೆ, ತಾಪಮಾನ, ಆರ್ದ್ರತೆ, ಗಾಳಿಯ ವೇಗ, ದಿಕ್ಕು, ಹಾಗೂ ಮೋಡ ವಾತಾವರಣ ಮುಂತಾದ ವಿದ್ಯಮಾನಗಳನ್ನು ತಿಳಿಯಲು ಅವಕಾಶ ಕಲ್ಪಿಸಲಾಗಿದೆ.
- ಹವಾಮಾನ ಆಧಾರಿತ ಮುನ್ಸೂಚನೆ ಮತ್ತು ಸಲಹೆ ಸೂಚನೆಗಳು ಪ್ರಾದೇಶಿಕ ಮಟ್ಟದ ಹವಾಮಾನ ಆಧಾರಿತ ಅಂಶಗಳನ್ನು ಆಧಾರಿಸಿ ನೀಡಲಾಗುತ್ತಿದೆ.
- ಪ್ರತಿಕೂಲ ಹವಾಮಾನ ಪರಿಸ್ಥಿತಿಗಳು, ಜಲಾಶಯ ಮತ್ತು ಸಣ್ಣ ನೀರಾವರಿ ಕೆರೆಕಟ್ಟೆಗಳ ಪರಿಸ್ಥಿತಿ ವಿವರಗಳನ್ನು ಸಹ ನೀಡಲಾಗುತ್ತಿದೆ.
- ಜನ ಸಮುದಾಯದ ಪ್ರತಿ ಕರೆಯನ್ನು ಧ್ವನಿಮುದ್ರಿತಗೊಳಿಸಲಾಗುತ್ತಿರುವುದು ಸಹಾಯವಾಣಿಯಿಂದ ನೀಡುವ ಸಲಹೆ ಸೂಚನೆಗಳಲ್ಲಿ ಸುಧಾರಣೆ ಮಾಡಿಕೊಳ್ಳುವುದಕ್ಕೆ ಸಹಾಯವಾಗಿದೆ.

"ವರುಣ ಮಿತ್ರ" - ಸಹಾಯವಾಣಿಯ ಮೂಲಕ ರೈತರು ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸಂಬಂದಪಟ್ಟ ಹವಾಮಾನ ಮುನ್ಸೂಚನೆಯು ಪಡೆದುಕೊಳ್ಳುತ್ತಿದ್ದು ರೈತರ ಕೃಷಿ ಕಾರ್ಯಗಳಾದ ಉಳುಮೆ, ಬಿತ್ತನೆ, ಗೊಬ್ಬರ ಚೆಲ್ಲುವುದು, ಔಷದಿ ಸಿಂಪಡಣೆ ಮತ್ತು ಕುಯ್ಲು ಕಾರ್ಯಗಳಿಗೆ ಸೂಕ್ತ ಸಮಯ ನಿಗದಿಗೊಳಿಸಲು ನೆರವಾಗುತ್ತಿರುವುದರಿಂದ ಸಂಭವಿಸಬಹುದಾದ ಬೆಳೆ ನಷ್ಟವನ್ನು ತಗ್ಗಿಸಲು ಹಾಗೂ ಹೆಚ್ಚಿನ ಇಳುವರಿ ಪಡೆಯಲು

ಸಾಧ್ಯವಾಗುತ್ತಿದೆ. ಅಲ್ಲದೆ ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲಿ ಮುಂಜಾಗ್ರತ ಕ್ರಮ ಕೈಗೊಳ್ಳಲು ನೆರವಾಗಿದೆ.

ವರುಣಮಿತ್ರ ಸಹಾಯವಾಣಿ ರೈತರಿಗೆ ಹೇಗೆ ನೆರವಾಗುತ್ತಿದೆ.

"ವರುಣ ಮಿತ್ರ" ಸಹಾಯವಾಣಿಯು ರೈತರಿಗೆ ಕೃಷಿ ಚಟುವಟಿಕೆಗಳ ವಿವಿಧ ಹಂತಗಳಲ್ಲಿ ಮುಖ್ಯವಾಗಿ ಕೆಳಕಂಡ ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಮಟ್ಟದಲ್ಲಿ ನೆರವಾಗುತ್ತಿದೆ:

- **ಬಿತ್ತನೆ :** ರೈತರ ಕೃಷಿ ಚಟುವಟಿಕೆಗಳಿಗೆ ಮುಂಗಾರು ಮಳೆಯು ಹೆಚ್ಚು ಪ್ರಾಮುಖ್ಯತೆ ಪಡೆದಿದ್ದು, "ವರುಣ ಮಿತ್ರ" ಸಹಾಯವಾಣಿಯ ಮೂಲಕ ಲಭ್ಯವಿರುವ ಮುಂಗಾರು ಪ್ರಾರಂಭದ ದಿನಾಂಕವನ್ನು ಅನುಸರಿಸಿ ಬಿತ್ತನೆ, ಬೆಳೆ ಆಯ್ಕೆ ಮತ್ತು ಇತರೆ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವುದು ಹಾಗೂ ಮುಂಗಾರು ವಿಳಂಬವಾದ ಪಕ್ಷದಲ್ಲಿ ಸೂಕ್ತ ಅಲ್ಪಾವಧಿಯ ಬೆಳೆಗಳ ಆಯ್ಕೆ ಕೈಗೊಂಡು ರೈತರಿಗೆ ಬಿತ್ತನೆಯ ಸಂದರ್ಭಗಳಲ್ಲಿ ಆಗುವ ನಷ್ಟವನ್ನು ತಗ್ಗಿಸಲು ಸಹಾಯವಾಗಿದೆ.
- **ಕೀಟ ನಾಶಕ/ಔಷಧೋಪಚಾರದ ಹಂತಗಳು :** ಬೆಳೆಗಳಿಗೆ ತಗಲುವ ಕೀಟ ಮತ್ತು ರೋಗಭಾದೆಗಳ ಹತೋಟಿ ಮತ್ತು ರಕ್ಷಣೆಗೆ ಕೀಟನಾಶಕ ಮತ್ತು ಔಷದೋಪಚಾರವು ಅತೀ ಮುಖ್ಯವಾಗಿದೆ. ಕೀಟನಾಶಕ ಮತ್ತು ರಾಸಾಯನಿಕಗಳನ್ನು ಸಿಂಪಡಿಸಲು ಬಿಸಿಲಿನಿಂದ ಕೂಡಿದ ವಾತಾವರಣವು ಸೂಕ್ತವಾಗಿದ್ದು, ಮಳೆಯಾಗುವುದು, ಮೊಡ ಕವಿದ ವಾತಾವರಣ ಮತ್ತು ಹೆಚ್ಚಿನ ಗಾಳಿಯಿಂದ ಕೂಡಿದ ವಾತಾವರಣವು ಬೆಳೆಗಳಿಗೆ ಸಿಂಪಡಿಸಿದ ಕೀಟನಾಶಕ ಮತ್ತು ರಾಸಾಯನಿಕಗಳ ಪರಿಣಾಮಗಳನ್ನು ಕಡಿಮೆಯಾಗುತ್ತದೆ ಅಲ್ಲದೇ ರೈತರು ಕೀಟನಾಶಕ ಮತ್ತು ಔಷದೋಪಚಾರಗಳಿಗೆ ತಗುಲುವ ವೆಚ್ಚ, ಸಮಯ ಮತ್ತು ಸಂಪನ್ಮೂಲಗಳು ನಷ್ಟವಾಗುತ್ತದೆ, ಇದನ್ನು ತಪ್ಪಿಸಲು ರೈತರು ವರುಣ ಮಿತ್ರ ಸಹಾಯವಾಣಿಗೆ ಕರೆಮಾಡಿ ಹವಾಮಾನ ಪರಿಸ್ಥಿತಿಗಳ ಮಾಹಿತಿಯನ್ನು ಆಧಾರಿಸಿ ಕೀಟನಾಶಕ ಮತ್ತು ರಾಸಾಯನಿಕಗಳ ಸಿಂಪಡನೆಗೆ ಸೂಕ್ತ ಸಮಯದ ನಿರ್ಧಾರವನ್ನು ಕೈಗೊಂಡು ಬೆಳೆಗಳ ರಕ್ಷಣೆ ಮತ್ತು ಹೆಚ್ಚಿನ ಇಳುವರಿ ಪಡೆಯಲು ಸಹಾಯವಾಗುತ್ತಿದೆ.
- **ನೀರಾವರಿ :** ವರುಣ ಮಿತ್ರ ಸಹಾಯವಾಣಿಯು ಮುಂದಿನ 3 ರಿಂದ 10 ದಿನಗಳ ಮಳೆ ಮುನ್ಸೂಚನೆ ವಿವರಗಳನ್ನು ನೀಡುತ್ತಿದ್ದು, ರೈತರು ಮಳೆ ಮುನ್ಸೂಚನೆಯ ಅನ್ವಯ ಬೆಳೆಗಳಿಗೆ ಅಗತ್ಯವಾದ ತೇವಾಂಶವನ್ನು ಆಧಾರಿಸಿ ಬೆಳೆಗಳಿಗೆ ನೀರು ಹಾಯಿಸುವುದನ್ನು ನಿರ್ಧರಿಸಲು ಸಹಾಯವಾಗುತ್ತಿದ್ದು, ರೈತರು ಬೆಳೆಗಳಿಗೆ ನೀರುಣಿಸಲು ತಗಲುವ ವಿದ್ಯುತ್ ಮತ್ತು ಹಾಗೂ ಇಂದನ ವೆಚ್ಚ ಅತ್ಯಮೂಲ್ಯ ಜಲ ಸಂಪನ್ಮೂಲಗಳ ರಕ್ಷಣೆಗೆ ನೆರವಾಗುತ್ತಿದೆ.

- **ಕಟಾವು :** ಬೆಳೆ ಕುಯಿಲು/ಕಟಾವು ಹಂತವು ಅತೀ ಪ್ರಮುಖವಾಗಿದ್ದು, ಹವಾಮಾನ ವೈಪರೀತ್ಯಗಳು, ಅತೀವೃಷ್ಟಿ, ಆಲಿಕಲ್ಲು ಮಳೆ ಇತರೆ ಪರಿಣಾಮಗಳಿಂದ ಬೆಳೆಹಾನಿಯುಂಟಾಗಿ ರೈತರಿಗೆ ಹೆಚ್ಚಿನ ನಷ್ಟವುಂಟಾಗುತ್ತಿರುವುದು ಸಾಮಾನ್ಯವಾಗಿದೆ. ವರುಣ ಮಿತ್ರ ಸಹಾಯವಾಣಿಯು ನೀಡಲಾಗುತ್ತಿರುವ ಹವಾಮಾನ ಮುನ್ಸೂಚನೆ, ಸಕಾಲದಲ್ಲಿ ನಿಖರ ಮಾಹಿತಿಗಳು ಪ್ರತಿಕೂಲ ಹವಾಮಾನ ಪರಿಸ್ಥಿತಿ ಸಂದರ್ಭಗಳಲ್ಲಿ ಕಟಾವು/ಕುಯಿಲು ಹಂತದ ಬೆಳೆಗಳ ಕಟಾವಿಗೆ ಸೂಕ್ತ ಸಮಯದ ನಿರ್ಧಾರ ಮತ್ತು ಬೆಳೆಗಳ ರಕ್ಷಣೆಗೆ ಅಗತ್ಯವಾದ ಮುಂಜಾಗ್ರತೆ ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಬೆಳೆನಷ್ಟವನ್ನು ತಪ್ಪಿಸಲು ನೆರವಾಗುತ್ತಿದೆ.

2023-24ನೇ ಸಾಲಿನಲ್ಲಿ (ಜನವರಿ-ಡಿಸೆಂಬರ್) ತಿಂಗಳುವಾರು ಸ್ವೀಕರಿಸಲಾದ ಕರೆ ವಿವರಗಳು



2011- 2024 (ಜನವರಿ) ವರೆಗಿನ ವಾರ್ಷಿಕ ಕರೆ ಸಂಪುಟಗಳು



ವರುಣ ಮಿತ್ರ ಸಹಾಯವಾಣಿಗೆ 2011 ರಲ್ಲಿ 6,565 ರಷ್ಟು ಕರೆಗಳು ಬಂದಿದ್ದು, 2023 ರಲ್ಲಿ 22.49 ಲಕ್ಷಕ್ಕೂ ಹೆಚ್ಚು ಕರೆಗಳನ್ನು ಸ್ವೀಕರಿಸಿರುವುದನ್ನು ಗಮನಿಸಬಹುದಾಗಿದೆ.

ಭಾರತದಂತಹ ದೇಶಗಳಲ್ಲಿ ಹವಾಮಾನ ವೈಪರೀತ್ಯಗಳು ಮತ್ತು ಮಾನ್‌ಸೂನ್ ಮಾರುತಗಳ ವ್ಯತ್ಯಯಗಳು ಸಾಮಾನ್ಯವಾಗಿದ್ದು, ದೇಶದ ಕೃಷಿ ಅವಲಂಬಿತ ಜನಸಮುದಾಯದ ಮೇಲೆ ಗಣನೀಯ ಪರಿಣಾಮ ಬೀರುತ್ತದೆ. ಸಕಾಲಲ್ಲಿ ನೀಡಲಾಗುವ ನಿಖರ ಹವಾಮಾನ ಆಧಾರಿತ ಮಾಹಿತಿ, ಮುನ್ಸೂಚನೆ, ಮುನ್ನೆಚ್ಚರಿಕೆ, ಸಲಹೆ, ಸೂಚನೆಗಳು ಕೃಷಿ ಕ್ಷೇತ್ರದ ಸಂಭವನೀಯ ನಷ್ಟ ತಗ್ಗಿಸುವಿಕೆಯಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತದೆ.

ವರುಣ ಮಿತ್ರ ಸಹಾಯವಾಣಿಯು ರೈತ ಸಮುದಾಯಕ್ಕೆ ಮಳೆ, ಹವಾಮಾನ ಮತ್ತು ಕೃಷಿ ಸಂಬಂಧಿತ ಸಲಹೆ ಸೂಚನೆಗಳು, ಪ್ರತಿಕೂಲ ಹವಾಮಾನ ಪರಿಸ್ಥಿತಿಯಿಂದ ಸಂಭವನೀಯ ಬೆಳೆ ನಷ್ಟವನ್ನು ತಗ್ಗಿಸಲು ಮತ್ತು ಬೆಳೆ ಉತ್ಪಾದಕತೆಯನ್ನು ಹೆಚ್ಚಿಸಲು ನೆರವಾಗುತ್ತಿದೆ. ವರುಣ ಮಿತ್ರ ಸಹಾಯವಾಣಿಯ ಕರೆಗಳ ಆಧಾರಿಸಿದ ದತ್ತಾಂಶಗಳನ್ನು ರಾಜ್ಯದ ಪ್ರಾದೇಶಿಕ ಮಟ್ಟದಲ್ಲಿ ಕೃಷಿ ಮತ್ತು ಬರ ಪರಿಸ್ಥಿತಿಗಳ ಉಸ್ತುವಾರಿ ಮತ್ತು ನಿರ್ವಹಣೆಗೆ ಸಹಾಯವಾಗುತ್ತಿದೆ.

ವರುಣ ಮಿತ್ರ ಸಹಾಯವಾಣಿ ವೇದಿಕೆಯು ಒಂದು ದಶಕಕ್ಕೂ ಹೆಚ್ಚು ಕಾಲ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಈ ಕ್ಷೇತ್ರದಲ್ಲಿ ದೇಶದಲ್ಲೇ ಒಂದು ಮಾದರಿ ವ್ಯವಸ್ಥೆಯಾಗಿದೆ. ದೇಶದ ಇತರ ರಾಜ್ಯಗಳಲ್ಲಿ ಇದೇ ರೀತಿಯ ವ್ಯವಸ್ಥೆಯನ್ನು ಅಳವಡಿಸುವುದರಿಂದ ಕೃಷಿ ಮತ್ತು ಸಂಬಂಧಿತ ವಲಯದ ಮೇಲಿನ ಹೊರೆ ಕಡಿಮೆ ಮಾಡಲು ಸಹಾಯವಾಗುತ್ತದೆ ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಮತ್ತು ಆ ಮೂಲಕ ರೈತನ ಜೀವನೋಪಾಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ.

ಕೇಂದ್ರದ ಯೋಜನೆಗಳು ಹಾಗೂ ತಾಂತ್ರಿಕ ನೆರವು :

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮತ್ತು ರಾಜ್ಯ ವಿಪತ್ತು ನಿರ್ವಹಣ ಪ್ರಾಧಿಕಾರವು ಜಂಟಿಯಾಗಿ ರಾಜ್ಯ ಸರ್ಕಾರಕ್ಕೆ ವಿಪತ್ತು ನಿರ್ವಹಣೆಗೆ ಅಗತ್ಯವಾದ ವೈಜ್ಞಾನಿಕ ಮತ್ತು ತಾಂತ್ರಿಕ ನೆರವುಗಳನ್ನು ನೀಡಲಾಗುತ್ತಿದ್ದು, ಕೆಳಕಂಡ ಯೋಜನೆಗಳನ್ನು ಕೈಗೊಂಡಿದೆ.

- **ರಾಜ್ಯ ವಿಪತ್ತು ನಿರ್ವಹಣೆ ಯೋಜನೆ :** ರಾಷ್ಟ್ರೀಯ ವಿಪತ್ತು ನಿರ್ವಹಣೆ ನೀತಿ 2009 ಮತ್ತು ರಾಜ್ಯ ವಿಪತ್ತು ನಿರ್ವಹಣೆ ನೀತಿ 2020ರ ಅನ್ವಯ ಕೇಂದ್ರವು ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರದ ಸಹಯೋಗದಲ್ಲಿ ರಾಜ್ಯ ವಿಪತ್ತು ನಿರ್ವಹಣೆ ಯೋಜನೆಯನ್ನು 2 ಅವೃತಿಗಳಲ್ಲಿ ಸಿದ್ಧಗೊಳಿಸಲಾಗಿದ್ದು, ಅವೃತಿ-1ರಲ್ಲಿ ವಿಪತ್ತು ಆಪಾಯ ಕಡಿತ ಕ್ರಮಗಳಾದ ಸನ್ನದ್ದತೆ, ಪ್ರತಿಕ್ರಿಯೆ, ಚೇತರಿಕೆ ಮತ್ತು ಸದೃಡ ಮರುರಚನೆ ಬಗ್ಗೆ ಮಾಹಿತಿ ಹಾಗೂ ಅವೃತಿ-2ರಲ್ಲಿ ವಿಪತ್ತು ನಂತರದ

ನಿರ್ವಹಣೆಯಲ್ಲಿ ಸ್ಥಿತಿಸ್ಥಾಪಕತೆ, ಸನ್ನದ್ಧತೆ, ಪ್ರತಿಕ್ರಿಯೆ ಮತ್ತು ವಿಪತ್ತು ನಿರ್ವಹಣೆಯ ವಿವಿಧ ಹಂತಗಳಲ್ಲಿ ಅನುಸರಿಬೇಕಾದ ನೀತಿ ಹಾಗೂ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿ, ಸಮುದಾಯ ಭಾಗಿತ್ವ ಹಾಗೂ ಪ್ರಮಾಣಿಕೃತ ವಿಪತ್ತು ನಿರ್ವಹಣೆ ಕಾರ್ಯಚಾರಣೆಗಳನ್ನು ಒಳಗೊಂಡ ಮಾಹಿತಿಯನ್ನು ಒಳಗೊಂಡಿದೆ.

- **ಕರ್ನಾಟಕ ವಿಪತ್ತು ನಿರ್ವಹಣೆ ಮಾಹಿತಿ ವ್ಯವಸ್ಥೆ** (**KSDMIS**) : ವಿಪತ್ತು ನಿರ್ವಹಣೆಯಲ್ಲಿ ಅನುಸರಿಸುವ ಸಂಪ್ರಾದಾಯಿಕ ವಿಧಾನಗಳಿಂದ ಬದಲಾಗಿ ತಂತ್ರಜ್ಞಾನ ಅಧಾರಿತ ವಿಧಾನಗಳನ್ನು ಅಳವಡಿಸುವ ಮೂಲಕ ನಿಖರ ಹಾಗೂ ವಿಶ್ವಾರ್ಹ ಮಾಹಿತಿ, ದತ್ತಾಂಶಗಳನ್ನು ತ್ವರಿತಗತಿಯಲ್ಲಿ ಸ್ಥಳ ನಿರ್ಧಿಷ್ಟತೆಯೊಂದಿಗೆ ಸಂಗ್ರಹಿಸುವುದು, ವಿಪತ್ತು ನಿರ್ವಹಣೆಗೆ ಸಂಬಂಧಿತ ದಾಖಲೆಗಳನ್ನು ವೈಜ್ಞಾನಿಕವಾಗಿ ನಿರ್ವಹಿಸುವುದು, ವಿಶ್ಲೇಷಣೆ ಮತ್ತು ವರದಿಗಳನ್ನು ತಯಾರಿಸುವ ಪ್ರಕ್ರಿಯೆಯನ್ನು ಸ್ವಯಂ ಚಾಲಿತಗೊಳಿಸುವ ಮೂಲಕ ವಿಪತ್ತು ನಿರ್ವಹಣೆಯಲ್ಲಿ ಸುಧಾರಣಾತ್ಮಕ ಕ್ರಮವನ್ನು ಅನುಷ್ಠಾನಗೊಳಿಸಲು ಕೇಂದ್ರವು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣೆ ಮಾಹಿತಿ ವ್ಯವಸ್ಥೆ (KSDMIS) ಅಭಿವೃದ್ಧಿಪಡಿಸಿದೆ.

ಈ ಯೋಜನೆಯು ವಿಪತ್ತು ಮುನ್ಸೂಚನೆ, ತುರ್ತು ಕಾರ್ಯಾಚರಣೆ, ವಿಪತ್ತುಗಳಿಂದಾದ ಜನ-ಜಾನುವಾರುಗಳ ಪ್ರಾಣಹಾನಿ, ಆಸ್ತಿಪಾಸ್ತಿ ನಷ್ಟ ಮತ್ತು ಸಾರ್ವಜನಿಕ ಮೂಲಸೌಕರ್ಯಗಳ ಹಾನಿಯ ಮೌಲ್ಯಮಾಪನ ಹಾಗೂ ವಿಪತ್ತು ನಂತರದಲ್ಲಿ ಚೇತರಿಕೆ, ಪರಿಹಾರ, ಸದೃಡ ಮರುನಿರ್ಮಾಣದ ಹಂತಗಳಲ್ಲಿ ಮಾಹಿತಿ ತಂತ್ರಜ್ಞಾನ ಆಧಾರಿತ ತಂತ್ರಾಂಶಗಳು ಮತ್ತು ವ್ಯವಸ್ಥೆಗಳ ಅನುಷ್ಠಾನ ಹಾಗೂ ವಿಪತ್ತುಗಳಿಗೆ ಒಳಗಾದ ಸಂತ್ರಸ್ತರಿಗೆ ತ್ವರಿತ ಸ್ಪಂದನೆ, ತುರ್ತು ಕಾರ್ಯಾಚರಣೆ, ಸೂಕ್ತ ಸಮಯದಲ್ಲಿ ಸೂಕ್ತ ನಿರ್ದಾರ ಕೈಗೊಳ್ಳುವುದು, ಪರಿಹಾರ ಕಾರ್ಯಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವುದು, ತಂತ್ರಜ್ಞಾನ ಆಧಾರಿತ ಸ್ಥಳ ನಿರ್ದಿಷ್ಟತೆಯೊಂದಿಗೆ ತ್ವರಿತ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವುದು.

ಈ ಯೋಜನೆಯು ರಾಜ್ಯವ್ಯಾಪಿ ವಿಪತ್ತುಗಳಿಂದಾದ ಜನ-ಜಾನುವಾರುಗಳ ಪ್ರಾಣಹಾನಿ, ಕೃಷಿ, ತೋಟಗಾರಿಕೆ ಬೆಳೆನಷ್ಟ, ಆಸ್ತಿಪಾಸ್ತಿ ನಷ್ಟ ಮತ್ತು ಸಾರ್ವಜನಿಕ ಮೂಲಸೌಕರ್ಯಗಳ ಹಾನಿ ಮತ್ತು ಪರಿಹಾರ ಶಿಬಿರಗಳು, ಸ್ಥಳಾಂತರ, ಪತ್ತೆ, ಬೆಳೆ ಮತ್ತು ಮನೆಗಳ ಹಾನಿಗಳಿಗೆ ನೀಡಲಾದ ಪರಿಹಾರ ಧನ, ಗೋಶಾಲೆ, ಕುಡಿಯುವ ನೀರಿನ ಸೌಲ್ಯಭ್ಯಗಳು, ಮೇವು ದಾಸ್ತಾನು, ಅನುದಾನದ ಬಳಕೆ, ಪರಿಹಾರ ಮತ್ತು

ದುರಸ್ತಿ ಕಾರ್ಯಗಳನ್ನು ಜಿಪಿಎಸ್ ತಂತ್ರಜ್ಞಾನ ಆಧಾರಿತ ಸ್ಥಳ ನಿರ್ಧಿಷ್ಟತೆಯೊಂದಿಗೆ ಜಿಯೋ ಟ್ಯಾಗ್ ಹೊಂದಿದ ಛಾಯಚಿತ್ರಗಳು, ಅಡಿಯೋ ಕ್ಲಿಪ್‌ಗಳು, ವಿಡಿಯೋ ತುಣುಕುಗಳು, ಕೈಬರಹ ಟಿಪ್ಪಣಿಗಳು ಹಾಗೂ ನೈಜ ಘಟನೆಯನ್ನು ಆಧಾರಿಸಿದ ದತ್ತಾಂಶಗಳು, ವರದಿಗಳನ್ನು ಕರ್ನಾಟಕ ರಾಜ್ಯ ವಿಪತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯಲ್ಲಿ ದಾಖಲಿಸುವುದು ಪರಿಣಾಮಕಾರಿ ವಿಪತ್ತು ನಿರ್ವಹಣೆಗೆ ನೆರವಾಗಲಿದೆ.

- **ಜಿಲ್ಲಾ ಮಟ್ಟದ ಭೌಗೋಳಿಕ ಆಧಾರಿತ ವಿಪತ್ತು ನಿರ್ವಹಣೆ ಯೋಜನೆ :** ಜಿಲ್ಲಾ ಮಟ್ಟದ ಭೌಗೋಳಿಕ ಆಧಾರಿತ ವಿಪತ್ತು ನಿರ್ವಹಣೆ ಯೋಜನೆಯು ರಾಜ್ಯದ ವಿನೂತನ ಯೋಜನೆಯಾಗಿದ್ದು, ನಿಜ ಸಮಯದಲ್ಲಿ ಜಿಪಿಎಸ್ ತಂತ್ರಜ್ಞಾನ ಆಧಾರಿತ ಭೌಗೋಳಿಕ ಸ್ಥಳ ನಿರ್ಧಿಷ್ಟತೆಯೊಂದಿಗೆ ವಿಪತ್ತುಗಳಿಗೆ ಸಂಭಂಧಿಸಿದ ವಿಶ್ವಾರ್ಹ ದತ್ತಾಂಶಗಳ ಸಂಗ್ರಹಣೆ, ನಿರ್ವಹಣೆ, ವಿಶ್ಲೇಷಣೆ ಮತ್ತು ಸ್ಥಳಾಧರಿತ ಜಿಲ್ಲಾ ವಿಪತ್ತು ನಿರ್ವಹಣೆ ಯೋಜನೆಗಳನ್ನು ರೂಪಿಸುವುದು. ಹಾಗೂ ಜಿಪಿಎಸ್ ತಂತ್ರಜ್ಞಾನ ಆಧಾರಿತ ಸ್ಥಳ ನಿರ್ಧಿಷ್ಟತೆಯೊಂದಿಗೆ ಛಾಯಚಿತ್ರಗಳು, ಅಡಿಯೋ ಕ್ಲಿಪ್‌ಗಳು, ವಿಡಿಯೋ ತುಣುಕುಗಳು, ಕೈಬರಹ ಟಿಪ್ಪಣಿಗಳು ಹಾಗೂ ನೈಜ ಘಟನೆಯನ್ನು ಆಧಾರಿಸಿದ ದತ್ತಾಂಶಗಳು, ವರದಿಗಳನ್ನು ಸಿದ್ದಗೊಳಿಸುವುದು ಹಾಗೂ ಸ್ವಯಂಚಾಲಿತ ನಿರ್ಧಾರ ವ್ಯವಸ್ಥೆಯನ್ನು ಅಭಿವೃದ್ದಿಗೊಳಿಸುವ ಮುಖ್ಯ ಉದ್ದೇಶ ಹೊಂದಿದ್ದು, ಜಿಲ್ಲಾ ಮಟ್ಟದಲ್ಲಿ ವಿಪತ್ತು ಆಪಾಯವನ್ನು ಗಣನೀಯವಾಗಿ ಕಡಿತಗೊಳಿಸಿ ವಿಪತ್ತುಗಳಿಂದಾಗುವ ಆರ್ಥಿಕ-ಸಾಮಾಜಿಕ ನಷ್ಟವನ್ನು ತಗ್ಗಿಸುವುದು, ವಿಪತ್ತು ಸಂದರ್ಭಗಳಲ್ಲಿ ತ್ವರಿತ ಸ್ಪಂದನೆ, ಪರಿಹಾರ, ತುರ್ತು ಕಾರ್ಯಾಚರಣೆ, ವಿಪತ್ತು ನಿರ್ವಹಣೆಯಲ್ಲಿ ಸ್ಪಷ್ಟತೆ ಹಾಗೂ ಸುಸ್ಥಿರತೆಯೊಂದಿಗೆ ಭವಿಷ್ಯದ ವಿಪತ್ತು ಉಪಶಮನ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ವಿಪತ್ತು ಪರಿಹಾರ ಕಾರ್ಯಗಳಲ್ಲಿ ಪಾರದರ್ಶಕತೆ ಹಾಗೂ ವಿಪತ್ತು ನಿರ್ವಹಣೆಯಲ್ಲಿ ಅಗತ್ಯವಾದ ಸಂಪನ್ಮೂಲಗಳ ಕ್ರೂಢಿಕರಣ, ನಕ್ಷೆ ತಯಾರಿಕೆ, ವಿಪತ್ತು ಉಪಶಮನ ಕ್ರಮಗಳು ಮತ್ತು ವಿಪತ್ತು ನಿರ್ವಹಣಾ ಯೋಜನೆಗಳನ್ನು ರೂಪಿಸಲು ಜಿಲ್ಲಾ ಮಟ್ಟದ ಭೌಗೋಳಿಕ ಆಧಾರಿತ ವಿಪತ್ತು ನಿರ್ವಹಣೆ ಯೋಜನೆಯು ಕೇಂದ್ರವು ಸಿದ್ದಪಡಿಸಿದೆ.
- **ವಿಪತ್ತು ನಿರ್ವಹಣೆ ಕಾರ್ಯಾಚರಣೆ ಯೋಜನೆಗಳು :** ರಾಜ್ಯದಲ್ಲಿ ಉಂಟಾಗುವ ಬರ, ಪ್ರವಾಹ, ಭೂಕಂಪನ, ಬಿಸಿಗಾಳಿ ಮತ್ತು ಸಿಡಿಲು ಬಡಿತ ಪರಿಸ್ಥಿತಿಗಳ ವೈಜ್ಞಾನಿಕ ಹಿನ್ನೆಲೆಯಲ್ಲಿ ಹಿಂದಿನ ವಿಪತ್ತು ಪರಿಸ್ಥಿತಿಗಳಿಂದ ಕಲಿತ ಪಾಠ ಹಾಗೂ

ಅನುಭವಗಳನ್ನು ಆಧಾರಿಸಿ ವಿಪತ್ತು ಸಮಗ್ರ ನಿರ್ವಹಣೆಗೆ ಅಗತ್ಯವಾದ ಕಾರ್ಯಯೋಜನೆಗಳು, ತಂತ್ರಜ್ಞಾನ ಆಧಾರಿತ ಕ್ರಮಗಳ ಅನುಷ್ಠಾನ, ಮುನ್ನೆಚ್ಚರಿಕೆ, ಸನ್ನದ್ಧತೆಗಳು, ವಿವಿಧ ಇಲಾಖೆಗಳ ಅನುಸರಣ ಕ್ರಮಗಳು ಹಾಗೂ ವಿಪತ್ತುಗಳ ನಿರ್ವಹಣೆಯಲ್ಲಿನ ಪ್ರಮಾಣಿಕೃತ ವಿಪತ್ತು ನಿರ್ವಹಣೆ ಕಾರ್ಯಚಾರಣೆಗಳು ಸೇರಿದಂತೆ ಸಾರ್ವಜನಿಕ ಜಾಗೃತಿ, ಸಾಮಾರ್ಥ್ಯಭಿವೃದ್ಧಿ ಹಾಗೂ ವಿಪತ್ತು ಆಪಾಯ ಕಡಿತ ಮತ್ತು ಉಪಶಮನಗೊಳಿಸಲು ಕೇಂದ್ರವು ಪ್ರವಾಹ, ಭೂಕಂಪನ, ಬಿಸಿಗಾಳಿ ಮತ್ತು ಸಿಡಿಲು ಬಡಿತ ಕಾರ್ಯಚಾರಣೆ ಯೋಜನೆಗಳನ್ನು ಸಿದ್ದಪಡಿಸಿದೆ.

- **ಭಾರತೀಯ ವೈಮಾನಿಕ ಪ್ರದರ್ಶನ ವಿಪತ್ತು ನಿರ್ವಹಣೆ ಯೋಜನೆ :** ಭಾರತೀಯ ವೈಮಾನಿಕ ಪ್ರದರ್ಶನ ಕಾರ್ಯಕ್ರಮವು ಅಂತರಾಷ್ಟ್ರೀಯ ಮತ್ತು ಜಾಗತೀಕ ಮಟ್ಟದ ವೈಮಾನಿಕ ಉದ್ಯಮದಲ್ಲಿನ ವೃತಿಪರತೆ, ಮಾರುಕಟ್ಟೆ, ಒಳನೋಟ, ವಿನೂತನ ತಂತ್ರಜ್ಞಾನಗಳ ಅಭಿವೃದ್ಧಿ, ವೈಮಾನಿಕ ಉದ್ಯಮದಲ್ಲಿ ಹೂಡಿಕೆ, ಅವಿಷ್ಕಾರ, ಉತ್ಪನ್ನಗಳ ಪದರ್ಶನ ಹಾಗೂ ವೈಮಾನಿಕ ಕ್ಷೇತ್ರದಲ್ಲಿ ವ್ಯವಹಾರಗಳ ಕುರಿತಾದ ಒಂದು ವೇದಿಕೆಯಾಗಿದೆ. ವೈಮಾನಿಕ ಪ್ರದರ್ಶನದ ಒಳ ಹಾಗೂ ಹೊರಆವರಣದಲ್ಲಿ ಸಂಭವಿಸಬಹುದಾದ ವಿಪತ್ತುಗಳ ನಿರ್ವಹಣೆಯಲ್ಲಿ ಸಮನ್ವಯತೆ, ವಿವಿಧ ಇಲಾಖೆಗಳ ಜವಾಬ್ದಾರಿ ಮತ್ತು ಕರ್ತವ್ಯಗಳು ಹಾಗೂ ಮುಂಜಾಗ್ರತೆ ಮತ್ತು ಸನ್ನದ್ಧತೆ ಕ್ರಮಗಳನ್ನು ನಿರ್ವಹಿಸುವಲ್ಲಿ ವಿಪತ್ತು ನಿರ್ವಹಣಾ ಯೋಜನೆಯು ಅತ್ಯಂತ ಅಗತ್ಯವಾಗಿದೆ.

  ವೈಮಾನಿಕ ಪ್ರದರ್ಶನದಲ್ಲಿ ಸಂಭವಿಸಬಹುದಾದ ವಿಪತ್ತುಗಳ ನಿರ್ವಹಣೆ, ವಿಪತ್ತು ಅಪಾಯ ತಗ್ಗಿಸುವಿಕೆ, ಸುರಕ್ಷಿತೆ ಮತ್ತು ರಕ್ಷಣೆ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಇಲಾಖೆಯಗಳ ಸಮನ್ವಯತೆ, ವಿಪತ್ತುಗಳ ಸಂದರ್ಭಗಳಲ್ಲಿ ಮಾದ್ಯಮಗಳಿಗೆ ವಿಶ್ವಾಸಾರ್ಹ ಮಾಹಿತಿ ಒದಗಿಸುವುದು ಹಾಗೂ ಪ್ರಮಾಣಿಕೃತ ವಿಪತ್ತು ನಿರ್ವಹಣೆ ಕಾರ್ಯಚರಣೆಗಳನ್ನು ಒಳಗೊಂಡ ಭಾರತೀಯ ವೈಮಾನಿಕ ಪ್ರದರ್ಶನ ವಿಪತ್ತು ನಿರ್ವಹಣೆ ಯೋಜನೆ ಸಿದ್ದಪಡಿಸಿದೆ.

ವಿಪತ್ತು ಆಧಾರಿತ ಹಣಕಾಸು ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮನವಿಗಳ ಸಿದ್ದಪಡಿಸುವಿಕೆ: ಕೇಂದ್ರವು ರಾಜ್ಯದಲ್ಲಿ ಹವಾಮಾನ ಮಾಪನ ಕೇಂದ್ರದ ದತ್ತಾಂಶಗಳನ್ನು ಅಧಾರಿಸಿ ಬರ, ಪ್ರವಾಹ, ಚಂಡಮಾರುತ, ಭೂಕುಸಿತ, ಆಲಿಕಲ್ಲು ಮಳೆ ಹಾಗೂ ಇತರೆ ವಿಪತ್ತುಗಳಿಂದಾದ ಹಾನಿ ಮತ್ತು ನಷ್ಟಗಳ

ಮೌಲ್ಯಾಮಾಪನಗಳನ್ನು ಕೈಗೊಂಡು ವಿಪತ್ತು ನಿರ್ವಹಣೆ ಹಾಗೂ ತುರ್ತು ನಿರ್ವಹಣೆಗೆ ಅಗತ್ಯವಾದ ಹಣಕಾಸು ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮನವಿಗಳನ್ನು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದೊಂದಿಗೆ ಸಿದ್ಧಪಡಿಸಿ ಸಲ್ಲಿಸಲಾಗುತ್ತಿದೆ.

- **ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅವಲೋಕನ ಸಭೆಗಳಿಗೆ ಮಾಹಿತಿ** : ಕೇಂದ್ರವು ಹಲವು ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಹವಾಮಾನ ಮತ್ತು ವಿಪತ್ತು ನಿರ್ವಹಣೆ, ಬರ ಪರಿಸ್ಥಿತಿ ಅವಲೋಕನ ಸಭೆಗಳಿಗೆ ಸಕಾಲದ ವೈಜ್ಞಾನಿಕ ಮಾಹಿತಿಗಳನ್ನು ನೀಡುತ್ತಿದೆ.
- **ಬರ ನಿರ್ವಹಣೆ ಕೈಪಿಡಿ -2016ರ ಪರಿಷ್ಕರಣೆ :** ಕೇಂದ್ರ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ಪ್ರಕಟಿಸಿರುವ ಪರಿಷ್ಕೃತ ಬರ ನಿರ್ವಹಣೆ ಕೈಪಿಡಿ ಡಿಸೆಂಬರ್ -2016 ರಲ್ಲಿ ನೀಡಲಾಗಿರುವ ಬರ ನಿರ್ಧರಣೆ ಮಾನದಂಡಗಳನ್ನು ಕುಲಂಕುಷವಾಗಿ ಅಧ್ಯಯನ ಕೈಗೊಂಡು ಬರ ನಿರ್ಧರಣೆ ಮಾನದಂಡಗಳು ಕಠಿಣ ಮತ್ತು ವಾಸ್ತವಿಕತೆಗೆ ದೂರವಾಗಿರುವ ಹಿನ್ನೆಲೆಯಲ್ಲಿ ಬರ ನಿರ್ಧರಣೆ ಮಾನದಂಡಗಳನ್ನು ಸರಳೀಕರಿಸಲು ವೈಜ್ಞಾನಿಕ ವರದಿಗಳೊಂದಿಗೆ ಕೇಂದ್ರ ಸರ್ಕಾರದ ಇಲಾಖೆಯ ಅಧಿಕಾರಿಗಳೊಂದಿಗೆ ಸಮಲೋಚಿಸಿ ಬರ ನಿರ್ವಹಣೆ ಕೈಪಿಡಿ-2016ರ ಪರಿಷ್ಕರಣೆ ಮಾಡಲು ನೆರವಾಗಿದ್ದು, ಬರ ನಿರ್ವಹಣೆ ಮತ್ತು ಬರ ಪರಿಸ್ಥಿತಿ ಘೋಷಿಸಲು ರಾಜ್ಯವು ಸೇರಿದಂತೆ ಇತರೆ ರಾಜ್ಯಗಳಿಗೆ ಅನುಕೂಲವಾಗಿದೆ.

ಸಾಮಾರ್ಥ್ಯಭಿವೃದ್ಧಿ/ತರಬೇತಿ

ವಿಪತ್ತು ನಿರ್ವಹಣೆ, ವಿಪತ್ತು ಆಪಾಯ ತಗ್ಗಿಸುವಿಕೆ ಹಾಗೂ ವಿಪತ್ತು ನಿರ್ವಹಣೆಯಲ್ಲಿನ ಸನ್ನದ್ಧತೆಗಳು ಹಾಗೂ ಜಾಗೃತಿಯನ್ನು ಮೂಡಿಸಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಕ್ರಮಗಳು, ಕಾರ್ಯಗಾರಗಳನ್ನು ಆಯೋಜಿಸಲಾಗುತ್ತಿದೆ. ಅಲ್ಲದೇ ಈ ಕೇಂದ್ರದ ವೈಜ್ಞಾನಿಕ ಸಿಬ್ಬಂದಿಗಳು ವಿಶ್ವವಿದ್ಯಾನಿಲಯಗಳು ಮತ್ತು ತರಬೇತಿ ಸಂಸ್ಥೆಗಳಿಗೆ ಸಂಪನ್ಮೂಲಗಳನ್ನು ಒದಗಿಸಲಾಗುತ್ತಿದೆ. ಅಲ್ಲದೇ ಕೇಂದ್ರದ ಸಿಬ್ಬಂದಿಗಳಲ್ಲಿ ಕಾರ್ಯಕ್ಷಮತೆಯನ್ನು ಬಲಪಡಿಸಲು ರಾಷ್ಟ್ರೀಯ ವಿಪತ್ತು ನಿರ್ವಹಣೆ ಪ್ರಾಧಿಕಾರ ಹಾಗೂ ಇತರೆ ಕೇಂದ್ರ ಮತ್ತು ರಾಜ್ಯ ಸರ್ಕಾರವು ಅಯೋಜಿಸಲಾಗುವ ತರಬೇತಿಗಳಲ್ಲಿ ತರಬೇತಿಗಳನ್ನು ಪಡೆದುಕೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ.

ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಸೌಲಭ್ಯ

ವಿದ್ಯಾರ್ಥಿಗಳಲ್ಲಿ ವಿದ್ಯಾಭ್ಯಾಸದ ಅವಧಿಯಲ್ಲಿ ವೃತ್ತಿಪರ ಕಲಿಕೆ, ಕೌಶಲ್ಯಭಿವೃದ್ಧಿ, ಸೃಜನಶೀಲತೆಗಳು ಮತ್ತು ವೃತ್ತಿರಂಗದ ಸವಾಲುಗಳು ಮತ್ತು ಅವಕಾಶಗಳು ಹಾಗೂ ಪ್ರಯೋಗಿಕ ಕಲಿಕೆಯನ್ನು ವೃದ್ಧಿಗೊಳಿಸುವ ಸಲುವಾಗಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳಿಗೆ ಇಂಟರ್ನ್‌ಶಿಪ್ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ವಿದ್ಯಾರ್ಥಿಗಳು ಇಂಟರ್ನ್‌ಶಿಪ್ ಅವಧಿಯಲ್ಲಿ ವಿದ್ಯಾರ್ಥಿಗಳ ಆಸಕ್ತಿಯ ಅನುಗುಣವಾಗಿ ಕೇಂದ್ರದ ವೈಜ್ಞಾನಿಕ ಸಿಬ್ಬಂಧಿಗಳು ವಿಪತ್ತು ನಿರ್ವಹಣೆ, ಬರ, ಪ್ರವಾಹ, ಭೂಕಂಪನ, ಭೂಕುಸಿತ ಹಾಗೂ ಭೌಗೋಳಿಕ ಮಾಹಿತಿ ಮತ್ತು ದೂರ ಸಂವೇಧಿ ವಿಜ್ಞಾನ (GIS&RS) ದತ್ತಾಂಶ ವಿಶ್ಲೇಷಣೆ, ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಅನುಷ್ಠಾನಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡಲಾಗುತ್ತಿದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳಿಂದ ಕೇಂದ್ರದ ಕಾರ್ಯ ಚಟುವಟಿಕೆಗಳನ್ನು ಅಧಾರಿಸಿ ತರಬೇತಿ ಅವಧಿಯ ವರದಿಗಳನ್ನು ಸಿದ್ಧಪಡಿಸಿ ಸಲ್ಲಿಸಲಾಗುತ್ತಿದ್ದು, ಕೇಂದ್ರವು ವಿದ್ಯಾರ್ಥಿಗಳಲ್ಲಿ ವಿಪತ್ತು ನಿರ್ವಹಣೆ ಮತ್ತು ತಂತ್ರಜ್ಞಾನ ಅನುಷ್ಠಾನಗಳು ಕುರಿತ ಕಲಿಕೆಯಲ್ಲಿ ವಿಸ್ತಾರತೆ, ಆತ್ಮವಿಶ್ವಾಸ ಹಾಗೂ ಉದ್ಯೋಗ ಅವಕಾಶಗಳಿಗೆ ಸಂಬಂಧಿಸಿದ ಮಾರ್ಗದರ್ಶನಗಳನ್ನು ನೀಡುವಲ್ಲಿ ನಿರತವಾಗಿದೆ.

ಕೇಂದ್ರವು ರಾಜ್ಯದ ಹವಾಮಾನ ಆಧಾರಿತ ದಿನಂಪ್ರತಿ ದೈನಂದಿನ ವರದಿಗಳು, ಸಾಪ್ತಾಯಿಕ, ಮಾಸಿಕ, ಋತುಮಾನ ವರದಿಗಳನ್ನು ಸಿದ್ಧಪಡಿಸಲಾಗುತ್ತಿದೆ. ಅಲ್ಲದೇ ಕೇಂದ್ರವು ದೇಶದ ಹಲವು ರಾಷ್ಟ್ರೀಯ ಮಟ್ಟದ ಸಂಸ್ಥೆಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಳ್ಳಲಾಗಿದೆ. ಹಾಗೂ ಕೇಂದ್ರವು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಯುನಿಸೆಫ್ ಸಹಯೋಗದಲ್ಲಿ ರಾಜ್ಯ ವಿಪತ್ತು ಅಪಾಯ ತಗ್ಗಿಸುವಿಕೆ ಮಾರ್ಗನಕ್ಷೆ, ಶಾಲಾ ಸುರಕ್ಷತೆಗೆ ಸಂಬಂದಿಸಿದ ವಿಪತ್ತು ನಿರ್ವಹಣೆ ಯೋಜನೆಗಳನ್ನು ರೂಪಿಸಲು ಕ್ರಮ ಕೈಗೊಂಡಿದೆ.

ರಾಜ್ಯ/ರಾಷ್ಟ್ರೀಯ ಮಟ್ಟದ ಸಂಸ್ಥೆಗಳೊಂದಿಗೆ KSNDMC ಯ ತಿಳುವಳಿಕೆ ಒಪ್ಪಂದ

1. Space Applications Centre (SAC), ISRO, GOI, Ahmedabad
2. National Centre for Medium Range Weather Forecasting (NCMRWF), New Delhi
3. CSIR Fourth Paradigm Institute (CSIR-4PI), Bengaluru
4. Central Ground Water Board (CGWB), Bengaluru
5. Smart Cities of Bengaluru and Hubbali-Dharwad
6. Institute for Socio Economic Change (ISEC), Bengaluru
7. Watershed Development Department (WDD), Bengaluru
8. SPMU-Atal Bhujal, Bengaluru
9. University of Agricultural Sciences, Bengaluru
10. Geological Survey of India, (GSI), Kolkata

VII. ವಿಪತ್ತು ನಿರ್ವಹಣೆಗಾಗಿ ಕಂದಾಯ ಇಲಾಖೆ (ವಿ.ನಿ) ಹೊರಡಿಸಲಾದ ಸರ್ಕಾರದ ಆದೇಶ ಮತ್ತ ಸುತ್ತೋಲೆಗಳು

ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಕೆಳಕಂಡ ಕಛೇರಿ ಆದೇಶ/ ಸುತ್ತೋಲೆಗಳನ್ನು ಹೊರಡಿಸಲಾಗಿದೆ:

ಕ್ರ. ಸಂ.	ಮಾಹೆ	ವಿಷಯ	ಆದೇಶ/ ಸುತ್ತೋಲೆ ಸಂಖ್ಯೆ & ದಿನಾಂಕ:
1	ಏಪ್ರಿಲ್ 2023	ಬಿಸಿಗಾಳಿ ಸಮಯದಲ್ಲಿ ಪ್ರತಿಕೂಲ ಪರಿಣಾಮವನ್ನು ಕಡಿಮೆ ಮಾಡಲು ಸಲಹೆ / ಸೂಚನೆಗಳು	ಕಂಇ 155 ಟಿಎನ್ಆರ್ 2023 ದಿನಾಂಕ:25-04-2023
2	ಮೇ 2023	ಗುಡುಗು ಮತ್ತು ಸಿಡಿಲು ಬಡಿತ ಪ್ರತಿಕೂಲ ಪರಿಣಾಮವನ್ನು ತಗ್ಗಿಸಲು ಸನ್ನದ್ಧತೆಗಾಗಿ ಸಲಹೆ/ ಸೂಚನೆಗಳು	ಕಂಇ 173 ಟಿಎನ್ಆರ್ 2023 ದಿನಾಂಕ:22-05-2023
3		ಮುಂಗಾರು-2023 ಪೂರ್ವ ಸಿದ್ದತೆ ಕುರಿತು ಸಲಹೆ / ಸೂಚನೆಗಳು	ಕಂಇ 203 ಟಿಎನ್ಆರ್ 2023 ದಿನಾಂಕ:22-05-2023
4		2023ನೇ ಸಾಲಿನ ಪೂರ್ವ ಮುಂಗಾರಿನಲ್ಲಿ ಉಂಟಾದ ಬೆಳೆ ಹಾನಿ ಇನ್‌ಪುಟ್ ಸಬ್ಸಿಡಿ ಪಾವತಿಸಲು ಪರಿಹಾರ ಪೋರ್ಟಲ್‌ನಲ್ಲಿ ಅಗತ್ಯ ಮಾಹಿತಿಯನ್ನು ದಾಖಲಿಸಲು ಅವಕಾಶ ನೀಡುವ ಬಗ್ಗೆ.	ಕಂಇ 224 ಟಿಎನ್ಆರ್ 2023 ದಿನಾಂಕ:26-05-2023
5	ಜೂನ್ 2023	2023-24ನೇ ಸಾಲಿನಲ್ಲಿ ಪ್ರವಾಹ ಪರಿಹಾರ ಕಾರ್ಯಗಳಿಗೆ ರಾಜ್ಯ ವಿಪತ್ತು ನಿರ್ವಹಣಾ ನಿಧಿಯಡಿ ರೂ.42.00 ಕೋಟಿ ಬಿಡುಗಡೆ	ಕಂಇ 237 ಟಿಎನ್ಆರ್ 2023 ದಿನಾಂಕ:15-06-2023
6	ಜುಲೈ 2023	ಗದಗ ಹಾಗೂ ಕಲಬುರಗಿ ಜಿಲ್ಲೆಯ ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರ ಮಾಸಿಕ ಸಂಭಾವನೆಗಾಗಿ ಅನುದಾನ ಬಿಡುಗಡೆ ಮಾಡುವ ಕುರಿತು.	ಕಂಇ 30 ಟಿಎನ್ಆರ್ 2023 ದಿನಾಂಕ:21-07-2023
7		2023-24ನೇ ಸಾಲಿನಲ್ಲಿ ಅತಿವೃಷ್ಟಿ / ಪ್ರವಾಹದಿಂದ ಹಾನಿಯಾದ ಬೆಳೆಗಳಿಗೆ ಪರಿಷ್ಕೃತ ದರದಲ್ಲಿ ಇನ್‌ಪುಟ್ ಸಬ್ಸಿಡಿ ಪಾವತಿಸುವ ಕುರಿತು.	ಕಂಇ 238 ಟಿಎನ್ಆರ್ 2023 ದಿನಾಂಕ:25-07-2023

ಕ್ರ. ಸಂ.	ಮಾಹೆ	ವಿಷಯ	ಆದೇಶ/ ಸುತ್ತೋಲೆ ಸಂಖ್ಯೆ & ದಿನಾಂಕ:
8	ಆಗಸ್ಟ್ 2023	2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಉಂಟಾದ ಅತಿವೃಷ್ಟಿ / ಪ್ರವಾಹದಿಂದ ಹಾನಿಯಾದ ಮನೆಗಳ ಪುನರ್ ನಿರ್ಮಾಣ / ದುರಸ್ಥಿ ಕಾರ್ಯಕ್ಕೆ ಹೆಚ್ಚಿನ ಪರಿಹಾರ ನೀಡುವ ಬಗ್ಗೆ.	ಕಂಇ 243 ಟಿಎನ್ಆರ್ 2023 ದಿನಾಂಕ:03-08-2023
9		ಪ್ರವಾಹ ಪರಿಹಾರ ಕಾರ್ಯಗಳಿಗೆ ಉತ್ತರ ಕನ್ನಡ ಜಿಲ್ಲೆಗೆ SDRF ರಡಿ ರೂ.5.00 ಕೋಟಿ ಅನುದಾನ ಬಿಡುಗಡೆ	ಕಂಇ 237 ಟಿಎನ್ಆರ್ 2023 ದಿನಾಂಕ:07-08-2023
10		2023-24ನೇ ಸಾಲಿನಲ್ಲಿ ರಾಜ್ಯದ ಬರ ನಿರ್ವಹಣೆ ಕುರಿತಂತೆ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಜಂಟಿ ಸಮೀಕ್ಷೆ ಕೈಗೊಂಡು ನಿಗದಿತ ತಾಲ್ಲೂಕುಗಳಲ್ಲಿನ ಪರಿಶೀಲನೆ ಹಾಗೂ ದೃಢೀಕರಣ (Ground Truthing) ಕುರಿತು.	ಕಂಇ 429 ಟಿಎನ್ಆರ್ 2023 ದಿನಾಂಕ:25-08-2023
11	ಸೆಪ್ಟೆಂಬರ್ 2023	2023-24ನೇ ಸಾಲಿನಲ್ಲಿ ರಾಜ್ಯದ ಬರ ನಿರ್ವಹಣೆ ಕುರಿತಂತೆ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಜಂಟಿ ಸಮೀಕ್ಷೆ ಕೈಗೊಂಡು ನಿಗದಿತ ತಾಲ್ಲೂಕುಗಳಲ್ಲಿನ ಪರಿಶೀಲನೆ ಹಾಗೂ ದೃಢೀಕರಣ (Ground Truthing) ಕುರಿತು	ಕಂಇ 429 ಟಿಎನ್ಆರ್ 2023 ದಿನಾಂಕ:04-09-2023
12		2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸುವ ಕುರಿತು	ಕಂಇ 449 ಟಿಎನ್ಆರ್ 2023 ದಿನಾಂಕ:13-09-2023
13	ಸೆಪ್ಟೆಂಬರ್ 2023	ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವನ್ನು ಬಲಪಡಿಸಲು ಮಂಜೂರಾಗಿರುವ ವಿಪತ್ತು ನಿರ್ವಹಣಾ ಪರಿಣಿತರ ಸೇವೆಯನ್ನು ಮುಂದುವರೆಸಲು ಹಾಗೂ ಅವರ ಮಾಸಿಕ ಸಂಭಾವನೆಗಾಗಿ ಒಟ್ಟಾರೆ ರೂ.168.49 ಲಕ್ಷ ಬಿಡುಗಡೆ	ಕಂಇ 266 ಟಿಎನ್ಆರ್ 2023 ದಿನಾಂಕ:16-09-2023
14		2019ರಿಂದ 2022 ನೇ ಸಾಲಿನ ವರೆಗೆ ನೆರೆ ಸಂತ್ರಸ್ಥರ ಮನೆ ಹಾನಿ ಪರಿಹಾರಕ್ಕಾಗಿ ರೂ.500.00 ಕೋಟಿ ಅನುದಾನ ಬಿಡುಗಡೆ ಮಾಡುವ ಕುರಿತು	ಕಂಇ 392 ಟಿಎನ್ಆರ್ 2023 ದಿನಾಂಕ:16-09-2023

ಕ್ರ. ಸಂ.	ಮಾಹೆ	ವಿಷಯ	ಆದೇಶ/ ಸುತ್ತೋಲೆ ಸಂಖ್ಯೆ & ದಿನಾಂಕ:
15		2023-24ನೇ ಸಾಲಿನಲ್ಲಿ ಬರ ಘೋಷಿತ ತಾಲ್ಲೂಕುಗಳಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಮೇವಿನ ಮಿನಿ ಕಿಟ್‌ಗಳ ಪೂರೈಕೆಗಾಗಿ ರೂ.20.00 ಕೋಟಿಗಳನ್ನು ಪಶುಸಂಗೋಪನೆ ಇಲಾಖೆಗೆ ಬಿಡುಗಡೆ.	ಕಂಇ 449 ಟಿಎನ್‌ಆರ್ 2023 ದಿನಾಂಕ:22-09-2023
16		ಬೀದರ್ ಜಿಲ್ಲೆಗೆ ಪ್ರಕೃತಿ ವಿಕೋಪ ಪರಿಹಾರ ಕಾರ್ಯ ಕೈಗೊಳ್ಳಲು ರೂ.4.00 ಕೋಟಿ ಅನುದಾನ ಬಿಡುಗಡೆ	ಕಂಇ 237 ಟಿಎನ್‌ಆರ್ 2023 ದಿನಾಂಕ:27-09-2023
17	ಅಕ್ಟೋಬರ್ 2023	2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸುವ ಕುರಿತು	ಕಂಇ 449 ಟಿಎನ್‌ಆರ್ 2023 ದಿನಾಂಕ:09-10-2023
18		2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಹೆಚ್ಚುವರಿ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸುವ ಕುರಿತು.	ಕಂಇ 449 ಟಿಎನ್‌ಆರ್ 2023 ದಿನಾಂಕ:12-10-2023
19		ಬರ ಪರಿಹಾರ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಸಲುವಾಗಿ ರೂ.324.00 ಕೋಟಿಗಳನ್ನು ಜಿಲ್ಲೆಗಳಿಗೆ ಬಿಡುಗಡೆಗೊಳಿಸುವ ಕುರಿತು.	ಕಂಇ 513 ಟಿಎನ್‌ಆರ್ 2023 ದಿನಾಂಕ:31-10-2023
20	ನವೆಂಬರ್ 2023	2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಹೆಚ್ಚುವರಿ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸುವ ಕುರಿತು.	ಕಂಇ 449 ಟಿಎನ್‌ಆರ್ 2023 ದಿನಾಂಕ:04-11-2023
21		BBMP ವ್ಯಾಪ್ತಿಯ ಮುಖ್ಯ ಕಛೇರಿ ಮತ್ತು 8 ವಲಯ ಕಛೇರಿಗಳಲ್ಲಿ ಪ್ರಾರಂಭಿಸಲಿರುವ ವಿಪತ್ತು ನಿರ್ವಹಣಾ ಘಟಕಗಳಿಗೆ ರೂ. 178.56 ಲಕ್ಷ ಅನುದಾನ ಬಿಡುಗಡೆ	ಕಂಇ 539 ಟಿಎನ್‌ಆರ್ 2022 ದಿನಾಂಕ:04-11-2023
22		2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಬರಪೀಡಿತ ತಾಲ್ಲೂಕುಗಳುಗೆ ತಾಲ್ಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿ ರಚನೆ ಕುರಿತು.	ಕಂಇ 449 ಟಿಎನ್‌ಆರ್ 2023 ದಿನಾಂಕ:06-11-2023
23		2023-24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅಂತರ ರಾಜ್ಯ ಮೇವು ಸಾಗಾಣಿಕೆಯನ್ನು ನಿರ್ಬಂಧಿಸುವ ಬಗ್ಗೆ	ಕಂಇ 497 ಟಿಎನ್‌ಆರ್ 2023 ದಿನಾಂಕ:22-11-2023

ಕ್ರ. ಸಂ.	ಮಾಹೆ	ವಿಷಯ	ಆದೇಶ/ ಸುತ್ತೋಲೆ ಸಂಖ್ಯೆ & ದಿನಾಂಕ:
24	ಡಿಸೆಂಬರ್ 2023	ಬರಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವು ಒದಗಿಸುವ ಸಂಬಂಧ ಕೈಗೊಳ್ಳಬೇಕಾದ ಕ್ರಮಗಳ ಕುರಿತು.	ಕಂಇ 543 ಟಿಎನ್ಆರ್ 2023 ದಿನಾಂಕ:04-12-2023
25	ಜನವರಿ 2024	2023 ಮುಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ಬೆಳೆ ಹಾನಿಗೆ ರೈತರಿಗೆ ಪರಿಹಾರ ನೀಡಲು ರೂ.105.00 ಕೋಟಿ ಅನುದಾನ ಬಿಡುಗಡೆ	ಕಂಇ 560 ಇಟಿಸಿ 2023 ದಿನಾಂಕ:05-01-2024
26		2023 ಮುಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ಬೆಳೆ ಹಾನಿಗೆ ರೈತರಿಗೆ ಪರಿಹಾರ ನೀಡಲು ರೂ.237.53 ಕೋಟಿ ಅನುದಾನ ಬಿಡುಗಡೆ	ಕಂಇ 560 ಇಟಿಸಿ 2023 ದಿನಾಂಕ:16-01-2024
27		2023 ಮುಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ಬೆಳೆ ಹಾನಿಗೆ ರೈತರಿಗೆ ಪರಿಹಾರ ನೀಡಲು ರೂ.342.47 ಕೋಟಿ ಅನುದಾನ ಬಿಡುಗಡೆ	ಕಂಇ 560 ಇಟಿಸಿ 2023 ದಿನಾಂಕ:22-01-2024

VIII. ಹಣಕಾಸಿನ ವ್ಯವಸ್ಥೆ

Financial Mechanism and Expenditure

The financing the relief expenditure is based on the recommendations of the successive Finance Commissions. 15th Finance Commission (FC) had recommended annual SDRF allocations to the State for the period from 2021 to 2026.

The SDRF has been sub-divided into three sub-allocation viz; (a) Response and Relief (40% of SDRMF), (b) Recovery and Reconstruction (30% of SDRMF), and Preparedness and Capacity-building (10% of SDRMF). There could be flexibility for re-allocation within the three sub-windows of SDRF for that financial year.

Over and above the provisions of the SDRF, funding is supplemented from the NDRF in the wake of disasters of severe nature.

The quantum of relief for notified calamities is as per the items and norms of assistance from SDRF/NDRF issued by the Ministry of Home Affairs vide letter dated 10-10-2022 and further amended vide letter dated 11-07-2023. The norms can be accessed through https://ndmindia.mha.gov.in/images/Revised%20Items%20&%20norms%20%2011-7-2023.pdf.

The MHA has also issued guidelines for constitution and administration of SDRF and NDRF same may be accessed at
https://ndmindia.mha.gov.in/images/gallery/Guidelines%20SDRF%20&%20NDRF.PDF
The details of allocation and expenditure of SDRF for the year 2023-24

SDRF / NDRF & SDMF fund position 2023 - 24 Allocation of SDRF (Rs. In Lakhs) (as on 3rd Feb' 2024)

Sl. No.	Head Of Account Details	Details of % as per GOI Norms	2023-24 Budget	Re-Appropriation By FD	State Additonality	Revised Budget	Concurrence Given By FD	Amount Released	Balance Available
1	2245-80-102-0-01-051- (Preparedness & Capacity Building)	10%	11627.00	-10380.15		1246.85	1246.85	363.85	883.00
2	2245-80-102-0-01-059 (Response & Relief Operations)	40%	46507.00	40160.40	37805.00	124472.40	124472.40	102900.00	21572.40
3	2245-80-102-0-01-140 (Minor Works - Recovery & Reconstruction)	30%	34880.00	-29780.00	50000.00	55100.00	55100.00	55100.00	0.00
TOTAL BUDGET SDRF			**93014.00**		**87805.00**	**180819.25**	**180819.25**	**158363.85**	**22455.40**
4	2245-80-102-0-02-059- State Disaster Mitigation Fund (SDMF)	20%	23253.00					0.00	0.00
TOTAL SDRF & SDMF			**116267.00**	**0.00**	**87805.00**	**204072.00**	**180819.25**	**158363.85**	**22455.40**

**** Interest Amount released by Finance department is Rs. 20 lakhs**